भारत 2023 INDIA

# G20- ಪ್ರಾಥಮಿಕ ಪುಸ್ತಕ

## *G20 ವಿಶ್ವವಿದ್ಯಾಲಯ ಸಂದಹನಕ್ಕಾಗಿ ಸಿದ್ಧಪಡಿಸಿದ ಹಿನ್ನೆಲೆ ಟಿಪ್ಪಣಿ*



वसुधैव कुटुम्बकम् | ONE EARTH • ONE FAMILY • ONE FUTURE

## ಸ್ವೀಕೃತಿ

'G20-ಪ್ರಾಥಮಿಕ ಪುಸ್ತಕವನ್ನು' RISನ ಡೈರೆಕ್ಟರ್ ಜನರಲ್, ಪ್ರಾಧ್ಯಾಪಕರಾದ ಸಚಿನ್ ಚತುರ್ವೇದಿಯವರ ಒಟ್ಟಾರೆ ಮಾರ್ಗದರ್ಶನದ ಅಡಿಯಲ್ಲಿ ಸಿದ್ಧಪಡಿಸಲಾಗಿದೆ. ಈ ದಾಖಲೆಗಾಗಿ ನವದೆಹಲಿಯ TGII ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನ ಶ್ರೀ. ಮನೀಶ್ ಚಂದ್ ಮತ್ತು RIS ತಂಡದ ಸಹಾಯಕ ಪ್ರಾಧ್ಯಾಪಕರಾದ ಡಾ. ಪ್ರಿಯದರ್ಶಿ ದಾಶ್, ಫೆಲೋಶಿಪ್ ಮಾಡುತ್ತಿರುವ ಡಾ. ದುರ್ಗೇಶ್ ರೈ, ಮತ್ತು ಸಲಹೆಗಾರರಾದ ಡಾ. ರಾಹುಲ್ ರಂಜನ್ ಮತ್ತು ಡಾ. ಸಯಂತನ್ ಘೋಶಾಲ್ ಅವರು ಅಗತ್ಯ ದಾಖಲೆಗಳನ್ನು ಒದಗಿಸಿದ್ದಾರೆ.

ನಾವು ಜಿ20 ಶೆರ್ಪಾ, ಶ್ರೀ ಅಮಿತಾಭ್‌ಕಾಂತ್, G20 ಮುಖ್ಯ ಸಂಯೋಜಕರಾದ ಶ್ರೀ.ಹರ್ಷವರ್ಧನ್ ಶೃಂಗ್ಲಾ, ಜಿ20 OSD ಶ್ರೀ. ಮುಕ್ತೇಶ್ ಪರದೇಶಿ, ಜಿ20 ಹೆಚ್ಚುವರಿ ಕಾರ್ಯದರ್ಶಿ ಶ್ರೀ. ಅಭಯ್ ಠಾಕೂರ್ ಮತ್ತು ವಿದೇಶಾಂಗ ಸಚಿವಾಲಯದ ಜಂಟಿ ಕಾರ್ಯದರ್ಶಿಯಾದ (ನೀತಿ ಯೋಜನೆ ಮತ್ತು ಸಂಶೋಧನೆ) ಡಾ. ಸುಮಿತ್ ಸೇಠ್ ಅವರ ಮಾರ್ಗದರ್ಶನ ಮತ್ತು ಬೆಂಬಲಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳನ್ನು ಹೇಳಲು ಬಯಸುತ್ತೇವೆ.

ಜೊತೆಗೆ ವರದಿಯ ತಯಾರಿಯನ್ನು ನಿರ್ವಹಣೆ ಮಾಡಿದ RIS ಪಬ್ಲಿಕೇಶನ್ ತಂಡದ ಪ್ರಕಾಶನ ಅಧಿಕಾರಿ, ಶ್ರೀ. ತೀಶ್ ಮಲ್ಹೋತ್ರಾ ಮತ್ತು ಪ್ರಕಾಶನ ಸಹಾಯಕ, ಶ್ರೀ. ಸಚಿನ್ ಸಿಂಘಾಲ್ ರನ್ನು ಸಹ ಧನ್ಯವಾದಗಳನ್ನು ಹೇಳಲು ಬಯಸುತ್ತೇವೆ.


ಕೃತಿಸ್ವಾಮ್ಯ ©RIS, 2022

RIS :2022 ರಂದು ಮುದ್ರಿಸಲಾಗಿದೆ

भारत 2023 INDIA

# G20 ರಲ್ಲಿ ಭಾರತದ ಭರವಸೆ, ಸಾಮರಸ್ಯ ಮತ್ತು ಶಾಂತಿಯ ಅಧ್ಯಕ್ಷತೆ

ಜಗತ್ತಿನ ಅತ್ಯಂತ ಮುಂದುವರೆದ ಮತ್ತು ಉದಯೋನ್ಮುಖ ಆರ್ಥಿಕತೆಯ ಜಿ20 ಸಮೂಹದಲ್ಲಿ ಭಾರತದ ಅಧ್ಯಕ್ಷತೆಯು ಭರವಸೆ, ಸಾಮರಸ್ಯ, ಶಾಂತಿ ಮತ್ತು ಸುಸ್ಥಿರತೆಯ ಆಧಾರ ಸ್ತಂಭಗಳಾಗಿವೆ. ಭೌಗೋಳಿಕ ರಾಜಕೀಯ ಉದ್ವಿಗ್ನತೆಯಲ್ಲಿ ಅಂತರಗಳು ಹೆಚ್ಚುತ್ತಿರುವ ಸಮಯದಲ್ಲಿ ಜಾಗತಿಕ ಕಾರ್ಯಸೂಚಿಯನ್ನು ರೂಪಿಸಲು, ವಿಘಟಿತ ಜಗತ್ತಿನಲ್ಲಿ ಶಾಂತಿ, ಸುಸ್ಥಿರತೆ ಮತ್ತು ಹಂಚಿಕೆಯ ಸಾಮರಸ್ಯವನ್ನು ಮುಂದುವರೆಸಲು ಒಂದು ಉತ್ತಮ ಅವಕಾಶವನ್ನು ಒದಗಿಸುವುದಕ್ಕಾಗಿ G20 ಭಾರತವನ್ನು ವಿಶ್ವದ ಐದನೇ ಅತಿದೊಡ್ಡ ಆರ್ಥಿಕತೆಯಾಗಿ ಒದಗಿಸುತ್ತಿದೆ.

## ಅಂತರ್ಗತ ಮತ್ತು ಕ್ರಮ-ಆಧಾರಿತ

ನವೆಂಬರ್ 16, 2022ರಂದು ಇಂಡೋನೇಷ್ಯಾ ದ್ವೀಪ ಬಾಲಿಯ ರೆಸಾರ್ಟ್‌ನಲ್ಲಿ ನಡೆದ ಜಿ20 ಸಮಾವೇಶದ ಮುಕ್ತಾಯ ಅಧಿವೇಶನದಲ್ಲಿ ಇಂಡೋನೇಷ್ಯಾದ ಅಧ್ಯಕ್ಷರಾದ ಜೋಕೋ ವಿಡೋಡೋ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಗೆ ಸಾಂಕೇತಿಕವಾಗಿ ಜಿ20 ಅಧ್ಯಕ್ಷತೆಯನ್ನು ಹಸ್ತಾಂತರಿಸಿದರು. ವರ್ಷದ ಜಿ20 ಅಧ್ಯಕ್ಷತೆಯನ್ನು ಭಾರತ ಅಧಿಕೃತವಾಗಿ ಡಿಸೆಂಬರ್ 1, 2022 ರಂದು ಸ್ವೀಕರಿಸಿದ್ದು ಇದು ನವೆಂಬರ್ 30, 2023ರವರೆಗೆ ಮುಂದುವರೆಯುತ್ತದೆ. ಬಾಲಿಯಲ್ಲಿ ಪ್ರಧಾನ ಮಂತ್ರಿ ಮೋದಿಯವರು ಭಾರತದ ಜಿ20 ಅಧ್ಯಕ್ಷತೆಯು "ಅಂತರ್ಗತ, ಮಹಾತ್ವಾಕಾಂಕ್ಷೆಯ, ನಿರ್ಣಾಯಕ ಮತ್ತು ಕ್ರಮ-ಆಧಾರಿತವಾಗಿರುತ್ತದೆ" ಎಂದು ಖಾತ್ರಿಪಡಿಸಿದರು. ಭಾರತದ ಅಧ್ಯಕ್ಷತೆಯ ಆದ್ಯತೆಗಳು ಮತ್ತು ಪ್ರಮುಖ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಿಸುತ್ತಾ ಪ್ರಧಾನ ಮಂತ್ರಿ ಮೋದಿಯವರು ಶಾಂತಿ ಮತ್ತು ಸಾಮರಸ್ಯದ ಪರವಾಗಿ ಬಲವಾದ ಸಂದೇಶವನ್ನು ನೀಡಿದರು, ಅವರು "ಶಾಂತಿ ಮತ್ತ ಭದ್ರತೆ ಇಲ್ಲದೆ ಭವಿಷ್ಯದ ಪೀಳಿಗೆಗಳು ಆರ್ಥಿಕ ಬೆಳವಣಿಗೆ ಅಥವಾ ತಂತ್ರಜ್ಞಾನ ನಾವಿನ್ಯತೆಯ ಪ್ರಯೋಜನವನ್ನು ಪಡೆಯಲು ಸಾಧ್ಯವಿಲ್ಲ' ಎಂದೂ ಸಹ ಹೇಳಿದರು.

## G20 ಲಾಂಛನ: ಅರಳುವ ದಳಗಳು, ಏಳು ದಳಗಳು

ಭಾರತದ ಜಿ20 ಅಧ್ಯಕ್ಷತೆಯು "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ಎನ್ನುವ ವಿಷಯಾಧಾರಿತವಾಗಿದ್ದು ಇದು "ವಸುದೈವಕುಟುಂಬಕಂ" ಎನ್ನುವ ಪ್ರಾಚೀನ ಸಂಸ್ಕೃತದ ತತ್ವವನ್ನು ಸಾರುತ್ತದೆ. ಇದರ ಲಾಂಛನ ಅರಳುವ ಕಮಲದ ಏಳು ದಳಗಳು ಮಾನವ, ಪ್ರಾಣಿ, ಗಿಡ ಮತ್ತು ಸೂಕ್ಷ್ಮಜೀವಿಗಳು-ಜೀವನದ ಎಲ್ಲಾ ಮೌಲ್ಯಗಳನ್ನು ಮತ್ತು ಭೂಮಿ ಮತ್ತು ಬೃಹತ್ ವಿಶ್ವದಲ್ಲಿ ಅವುಗಳ ಪರಸ್ಪರ ಅವಲಂಬನೆಯನ್ನು ದೃಢಪಡಿಸುತ್ತದೆ. ಜಿ20 ಲಾಂಛನದಲ್ಲಿರುವ ಕಮಲದ ಸಂಕೇತವು "ಈ ವಿಪರೀತ ಸಮಯದಲ್ಲಿ ಭರವಸೆಯನ್ನು ಪ್ರತಿನಿಧಿಸುತ್ತದೆ. ಕಮಲದ ಏಳು ದಳಗಳು ವಿಶ್ವದ ಏಳು ಖಂಡಗಳನ್ನು ಮತ್ತು ಸಂಗೀತದ ಏಳು ಸ್ವರಗಳನ್ನು ಪ್ರತಿನಿಧಿಸುತ್ತದೆ. ಜಿ20 ಶೃಂಗಸಭೆಯು ಸಾಮರಸ್ಯದಲ್ಲಿ ಜಗತ್ತನ್ನು ಒಟ್ಟುಗೂಡಿಸುತ್ತದೆ. ಈ ಲಾಂಛನದಲ್ಲಿ, ಕಮಲವು ಭಾರತದ ಪೌರಾಣಿಕ ಪರಂಪರೆ, ನಮ್ಮ ನಂಬಿಕೆ, ನಮ್ಮ ಬುದ್ಧಿವಂತಿಕೆಯನ್ನು" ಬಿಂಬಿಸುತ್ತದೆ ಎಂದು ಪ್ರಧಾನ ಮಂತ್ರಿ ಶ್ರೀ. ನರೇಂದ್ರ ಮೋದಿಯವರು ನವೆಂಬರ್ 8, 2022 ರಂದು ಲಾಂಛನದ ಬಿಡುಗಡೆಯ ಸಮಯದಲ್ಲಿ ಹೇಳಿದರು.

ಭಾರತಕ್ಕಾಗಿ ಜಿ20 ಅಧ್ಯಕ್ಷತೆಯು "ಅಮೃತಕಾಲ"ದ ಆರಂಭವನ್ನು ಸೂಚಿಸುತ್ತದೆ. ಆಗಸ್ಟ್ 15, 2022 ರಂದು ಭಾರತದ ಸ್ವಾತಂತ್ರ್ಯದ 75 ನೇ ವಾರ್ಷಿಕೋತ್ಸವದಿಂದ ಆರಂಭವಾಗುವ ಈ 25 ವರ್ಷಗಳ ಅವಧಿಯು ಭವಿಷ್ಯದ, ಸಮೃದ್ಧ, ಅಂತರ್ಗತ ಮತ್ತು ಅಭಿವೃದ್ಧಿ ಹೊಂದಿದ ಸಮಾಜದ ಕಡೆಗೆ ಮಾನವ-ಕೇಂದ್ರಿತ ವಿಧಾನದಿಂದ ಗುರುತಿಸಲ್ಪಡುವ ಸ್ವಾತಂತ್ರ್ಯದ ಶತಮಾನೋತ್ಸವದವರೆಗೆ ಸಾಗುತ್ತದೆ.

## ಪ್ರಮುಖ ಆದ್ಯತೆಗಳು

ಭಾರತ ತನ್ನ ಜಿ20 ಅಧ್ಯಕ್ಷತೆಯನ್ನು ಭೌಗೋಳಿಕ ರಾಜಕೀಯ ಉದ್ವಿಗ್ನತೆಗಳಿಂದ ಹೆಚ್ಚಾಗಿರುವ ಆಹಾರ ಮತ್ತು ಶಕ್ತಿ ಭದ್ರತೆಯ ರೀತಿಯ ಬಹು ಆಯಾಮದ ಬಿಕ್ಕಟ್ಟನ್ನು ಎದುರಿಸುತ್ತಿರುವ ಜಗತ್ತಿನಲ್ಲಿ ಬದಲಾವಣೆ ಮತ್ತು ಜಾಗತಿಕ ರೂಪಾಂತರದ ವೇಗವರ್ಧಕವಾಗಿ ನೋಡುತ್ತದೆ. ಜಗತ್ತು ಯುದ್ಧಗಳನ್ನು ಮಾಡುತ್ತಿದ್ದಾಗ, ಸಾಮಾನ್ಯ ಜನರ ಜೀವನವನ್ನು ಅಪಾಯಕ್ಕೆ ತಳ್ಳುತ್ತಿರುವ ಸಮಯದಲ್ಲಿ ಜಾಗತಿಕ ಬೆಳವಣಿಗೆಯನ್ನು ಪುನರುಜ್ಜೀವನಗೊಳಿಸುವುದು, ಶಕ್ತಿಯುತ ಹವಾಮಾನ ಕ್ರಮಗಳು ಮತ್ತು ಸದೃಢ ಜಾಗತಿಕ ಆರೋಗ್ಯ ನಿರ್ಮಾಣ ರೀತಿಯ ಸರಣಿ ಸವಾಲುಗಳಿಗಾಗಿ ರಚನಾತ್ಮಕ ಮತ್ತು ಒಮ್ಮತ ಆಧಾರಿತ ಪರಿಹಾರಗಳನ್ನು ಒದಗಿಸಲು ಭಾರತ ತನ್ನ ಜಿ20 ಅಧ್ಯಕ್ಷತೆಯನ್ನು ಬಳಸಿಕೊಳ್ಳುತ್ತದೆ. ಸಾಂಕ್ರಾಮಿಕವು ಕೋಟಿಗಟ್ಟಲೆ ಜನರನ್ನು ಬಡತನದ ಕೂಪಕ್ಕೆ ತಳ್ಳಿರುವ ಕಾರಣಕ್ಕಾಗಿ ಆಹಾರ ಮತ್ತು ಪೋಷಣೆಯ ಭದ್ರತೆಯನ್ನು ಉತ್ತೇಜಿಸುವುದು ಒಂದು ಬಹು ಮುಖ್ಯ ಆದ್ಯತೆಯಾಗಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ತ್ವರಿತ ಗತಿಯಲ್ಲಿ ಟ್ರ್ಯಾಕ್ ಮಾಡುವುದು ಮತ್ತು LiFE(ಪರಿಸರಕ್ಕಾಗಿ ಜೀವನ) ಮೂಲಕ ಪರಿಸರಸ್ನೇಹಿ ಸುಸ್ಥಿರ ಜೀವನಶೈಲಿಯನ್ನು ಅಳವಡಿಸಿಕೊಳ್ಳಲು ಜಗತ್ತನ್ನು ಮುನ್ನಡೆಸುವುದು ಮುಂದಿನ ಕೆಲವು ತಿಂಗಳುಗಳ ಪ್ರಮುಖ ಆದ್ಯತೆಗಳಾಗಿವೆ. ಭಾರತ ಸಾಮಾಜಿಕ-ಆರ್ಥಿಕ ರೂಪಾಂತರದ

ವೇಗವರ್ಧಕವಾಗಲು ಮಾಹಿತಿ ತಂತ್ರಜ್ಞಾನದಲ್ಲಿ ಆಳವಾದ ಶಕ್ತಿಯನ್ನು ಹೊಂದಿರುವುದರೊಂದಿಗೆ ಭಾರತ ಡಿಜಿಟಲ್ ನಿರ್ಮಾಣವನ್ನು ರಚಿಸುವ ಕುರಿತಾಗಿ ಗಮನ ಹರಿಸುತ್ತಿದೆ. ಅಂತರ್ಗತ ಬೆಳವಣಿಗೆ ಮತ್ತು ಆರ್ಥಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವುದು ಸಹ ಪ್ರಮುಖ ಆದ್ಯತೆಗಳಾಗಿವೆ.

ಜಾಗತಿಕ ಸಂಸ್ಥೆಗಳು ವಿಘಟಿತ ಉದ್ವಿಗ್ನತೆಗಳಿಂದ ಬೇರೆಯಾಗುತ್ತಿರುವ ಮತ್ತು ಅವನತಿಯಾಗುತ್ತಿರುವ ಜಗತ್ತಿನಲ್ಲಿ, ಜಾಗತಿಕ ಜಿಡಿಪಿಯ ಶೇಖಡಾ 85%, ಅಂತರರಾಷ್ಟ್ರೀಯ ವ್ಯಾಪಾರದ ಶೇಖಡಾ 75% ಮತ್ತು ವಿಶ್ವದ ಜನಸಂಖ್ಯೆಯ ಮೂರನೇ ಎರಡು ಭಾಗವನ್ನು ಪ್ರತಿನಿಧಿಸುವ G20 ಎಂದಿಗಿಂತಲೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆಯುತ್ತದೆ. ಭಾರತದ ಅಧ್ಯಕ್ಷತೆಯಲ್ಲಿ, ಭಾರತವು ಜಾಗತಿಕ ಹಣಕಾಸು ಮತ್ತು ಆರ್ಥಿಕ ವಿಷಯಗಳ ಮೇಲೆ ಸಹಯೋಗಕ್ಕಾಗಿ ಪ್ರಮುಖ ಜಾಗತಿಕ ವೇದಿಕೆಯಾಗಿ ಜಿ20 ಸ್ಥಾನಮಾನ ಮತ್ತು ಅಧಿಕಾರವನ್ನು ಹೆಚ್ಚಿಸಲು ಬಯಸುತ್ತದೆ. ಜಿ20 ಎಷ್ಟಾದರೂ 2008ರ ಹಣಕಾಸು ಕುಸಿತದಿಂದ ಜನಿಸಿದ್ದು, ಇದು ಅಭಿವೃದ್ಧಿ ಹೊಂದಿದ ಮತ್ತು ಉದಯೋನ್ಮುಖ ಆರ್ಥಿಕತೆಗಳನ್ನು ಒಳಗೊಂಡಿರುವ ಹೊಸ ಪ್ರಾತಿನಿಧಿಕ ಬಹುಪಕ್ಷೀಯ ಗುಂಪುಗಳನ್ನು ರಚಿಸಲು ಜಗತ್ತನ್ನು ಒತ್ತಾಯಿಸಿತು. ಇದಕ್ಕೆ ಸಂಬಂಧಿಸಿದಂತೆ, ಪ್ರಧಾನ ಮಂತ್ರಿ ಮೋದಿಯವರು ಜಗತ್ತು "ಭರವಸೆಯೊಂದಿಗೆ ಜಿ20"ಯನ್ನು ನೋಡುತ್ತಿದೆ ಎಂದು ಒತ್ತಿ ಹೇಳಿದರು.

## ಅವಿಶ್ವಾಸನೀಯ ಭಾರತ

ಮುಂದುವರೆಯುತ್ತಾ, ಜಿ20 ಆರ್ಥಿಕ ಪ್ರಗತಿಯಿಂದ ಹಿಡಿದು ವಿಜ್ಞಾನ ಮತ್ತು ತಂತ್ರಜ್ಞಾನ, ಬಾಹ್ಯಾಕಾಶ, ನಾವಿನ್ಯತೆ ಮತ್ತು ಹೊಸ ಪ್ರಾರಂಭಗಳವರೆಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೊಸ ಉತ್ತುಂಗವನ್ನು ತಲುಪುವುದರಿಂದ ಹಿರಿಮೆ ಮತ್ತು ವೈವಿಧ್ಯತೆಯಲ್ಲಿ ಕೂಡಿದ "ಪ್ರಭಾಪ್ರಭುತ್ವದ ತಾಯಿ"ಯಾಗಿರುವ ಭಾರತವನ್ನು ಪ್ರದರ್ಶಿಸುವ ಒಂದು ಅವಕಾಶವೂ ಆಗಿದೆ. ಈ ರೋಮಾಂಚಕ ಹಾಗೂ ವೈವಿಧ್ಯಮಯ ದೇಶಕ್ಕೆ ಭೇಟಿ ನೀಡಲು ವಿಭಿನ್ನ ದೇಶಗಳಿಂದ ಅನೇಕ ಪ್ರತಿನಿಧಿಗಳನ್ನು ಕರೆತರಲು ಭಾರತ ಇಲ್ಲಿನ 56 ವಿಭಿನ್ನ ಸ್ಥಳಗಳಲ್ಲಿ 200ಕ್ಕೂ ಹೆಚ್ಚು ಜಿ20 ಸಂಬಂಧಿತ ಸಭೆಗಳನ್ನು ನಡೆಸುತ್ತದೆ. ಅನೇಕ ಸಂದರ್ಶಕರಿಗೆ, ಜಿ20 ಶೃಂಗಸಭೆಯು ಭಾರತದ ಮೊದಲ ಔತಣ ಹಾಗೂ ಅನುಭವವಾಗಿರುತ್ತದೆ, ಆದ್ದರಿಂದ ಎಲ್ಲಾ ಭಾರತೀಯರು ಇಡೀ ಜಗತ್ತನ್ನು ಸ್ವಾಗತಿಸಲು ಮತ್ತು ಅವರನ್ನು ಒಂದೇ ಕುಟುಂಬದ ಭಾಗವಾಗಿ ಪರಿಗಣಿಸಲು ತಮ್ಮ ಉತ್ತಮ ಪ್ರಯತ್ನಗಳನ್ನು ಮಾಡಬೇಕಿದೆ. 20-ರಾಷ್ಟ್ರಗಳ ಸಂಸ್ಥೆಯನ್ನು ನೇತೃತ್ವವನ್ನು ವಹಿಸಿಕೊಂಡಿರುವ ಭಾರತ ಮುಂಬರುವ 12 ತಿಂಗಳುಗಳಲ್ಲಿ ಯಾವುದನ್ನು ಸಾಧಿಸಲು ಉದ್ದೇಶಿಸಿದೆ ಎನ್ನುವ ಕುರಿತು ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಮಾಹಿತಿ ನೀಡಲು ಈ ಪ್ರಾಥಮಿಕ ಪುಸ್ತಕವು ಭಾರತದ ಜಿ20 ಅಧ್ಯಕ್ಷತೆ ಅಡಿಯಲ್ಲಿನ ಪ್ರಮುಖ ವಿಷಯಗಳ ಬಗ್ಗೆ ಚಿಕ್ಕ ಪರಿಚಯವನ್ನು ನೀಡುತ್ತದೆ. ಭಾರತವು ಜಾಗತಿಕ ಪ್ರಭಾವೀ ಶಕ್ತಿಯಾಗಿ ತನ್ನ ಸಾಮರ್ಥ್ಯಗಳನ್ನು ಒಟ್ಟುಗೂಡಿಸುತ್ತದೆ ಮತ್ತು ಹೆಚ್ಚು ಅಂತರ್ಗತ ಮತ್ತು ಸಮಾನ ಜಗತ್ತನ್ನು ರಚಿಸಲು ಪ್ರಯತ್ನಿಸುವ G20 ಪ್ರಕ್ರಿಯೆಯಲ್ಲಿ ತನ್ನ ಅಳಿಸಲಾಗದ ಛಾಯೆಯನ್ನು ಬಿಡುತ್ತದೆ ಎಂದು ನಾವು ನಂಬಿದ್ದೇವೆ.

# ಶಕ್ತಿ ಪರಿವರ್ತನೆ: ಹಸಿರು ಜಗತ್ತನ್ನು ರೂಪಿಸುವುದು



ಕಡಿಮೆ ಇಂಗಾಲದ ಬೆಳವಣಿಗೆಯನ್ನು ವೇಗಗೊಳಿಸಲು ಶಕ್ತಿಯ ಪರಿವರ್ತನೆಯನ್ನು ಉತ್ತೇಜಿಸುವುದು ಭಾರತದ ಸದ್ಯದ ನವೀಕರಿಸಬಹುದಾದ ಕ್ರಾಂತಿಯ ಪ್ರಮುಖ ಆದ್ಯತೆಯಾಗಿದ್ದು ಇದು ಭಾರತದ G20 ಅಧ್ಯಕ್ಷತೆಯ ಕಾರ್ಯಸೂಚಿಯಲ್ಲಿ ಇದನ್ನು ಪ್ರಮುಖವಾಗಿ ಕಾಣಬಹುದು. ಹೊಸ ಮಾನದಂಡಗಳು ಮತ್ತು ಗುರಿಗಳನ್ನು ಹೊಂದಿಸುವ ಮೂಲಕ ಭಾರತ ಈಗಾಗಲೇ ತನ್ನ ಅರ್ಧದಷ್ಟು ವಿದ್ಯುತ್ತನ್ನು ನವೀಕರಿಸಬಹುದಾದ ಮೂಲಗಳಿಂದ ಉತ್ಪಾದಿಸಲಾಗುವುದು ಎಂದು ಘೋಷಣೆ ಮಾಡಿದೆ. ಭಾರತದ ಪ್ರಕಾರ, ಅಂತರ್ಗತ ಶಕ್ತಿ ಪರಿವರ್ತನೆಗಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಸಮಯ ಸೀಮಿತ, ಅಗ್ಗದ ಹಣಕಾಸು ನಿಧಿ ಮತ್ತು ತಂತ್ರಜ್ಞಾನದ ಸುಸ್ಥಿರ ಪೂರೈಕೆಯ ಅಗತ್ಯವಿದೆ.

2021 ನವೆಂಬರ್ ರಂದು ಗ್ಲಾಸ್ಗೋ ನಲ್ಲಿ ನಡೆದ COP26 ಜಾಗತಿಕ ಹವಾಮಾನ ಶೃಂಗ ಸಭೆಯಲ್ಲಿ ಪ್ರಧಾನ ಮಂತ್ರಿ ಮೋದಿಯವರು ಅಂತರ್ಗತ ಶಕ್ತಿ ಪರಿವರ್ತನೆಯ ಕುರಿತು ತಮ್ಮ ದೃಷ್ಟಿಕೋನವನ್ನು ವಿವರಿಸಿದರು, ಅದರಲ್ಲಿ ಜಗತ್ತಿಗೆ "ಪಂಚಮಿತ್ರ:(ಐದು ಅಮೃತಗಳು)" ಪರಿಕಲ್ಪನೆಯನ್ನು ಪರಿಚಯಿಸಿದರು. ಈ ಐದು ದೀರ್ಘಾವಧಿಯ ಯೋಜನೆಯಡಿಯಲ್ಲಿ:

- ಭಾರತವು 2030 ರ ವೇಳೆಗೆ ತನ್ನ ಪಳೆಯುಳಿಕೆಯೇತರ ಶಕ್ತಿ ಸಾಮರ್ಥ್ಯವನ್ನು 500 GW ಗೆ ತಲುಪಲಿದೆ.
- ಭಾರತವು 2030 ರ ವೇಳೆಗೆ ನವೀಕರಿಸಬಹುದಾದ ಶಕ್ತಿಯಿಂದ ಶೇಖಡಾ 50% ನಷ್ಟು ಶಕ್ತಿಯ ಅವಶ್ಯಕತೆಗಳನ್ನು ಪೂರೈಸುತ್ತದೆ.
- ಭಾರತವು ಇಂದಿನಿಂದ 2030ರ ವೇಳೆಗೆ ಒಟ್ಟು ಉತ್ಪಾದಿಸಿದ ಇಂಗಾಲ ಹೊರಸೂಸುವಿಕೆಗಳನ್ನು ಒಂದು ಬಿಲಿಯನ್ ಟನ್ ಗಳಿಗೆ ಕಡಿಮೆ ಮಾಡುತ್ತದೆ.
- 2030ರ ವೇಳೆಗೆ, ಭಾರತ ತನ್ನ ಆರ್ಥಿಕತೆಯ ಇಂಗಾಲ ತೀವ್ರತೆಯನ್ನು ಶೇಖಡಾ 45% ಕ್ಕಿಂತಲೂ ಕಡಿಮೆ ಮಾಡುತ್ತದೆ.
- 2070ರ ವೇಳೆಗೆ, ಭಾರತ ತನ್ನ ನಿವ್ವಳ ಶೂನ್ಯದ ಗುರಿಯನ್ನು ಸಾಧಿಸುತ್ತದೆ. ಹವಾಮಾನ ಕ್ರಮಗಳಿಗೆ ಈ "ಪಂಚಾಮೃತ" ಭಾರತದ ಒಂದು ಅಭೂತಪೂರ್ವ ಕೊಡುಗೆಯಾಗಲಿದೆ.

"ಪಂಚಾಮೃತ"ದ ಈ ಪರಿಕಲ್ಪನೆಯು 2022-2023 ವರ್ಷಕ್ಕಾಗಿ ಜಿ20ರ ತನ್ನ ನೇತೃತ್ವದ ಅಡಿಯಲ್ಲಿ ಶಕ್ತಿ ಭದ್ರತೆ ಮತ್ತು ಶಕ್ತಿ ಪರಿವರ್ತನೆಯನ್ನು ಉತ್ತೇಜಿಸಲು ಭಾರತದ ಪ್ರಯತ್ನಗಳನ್ನು ಎತ್ತಿಹಿಡಿಯುತ್ತದೆ. ಭಾರತಕ್ಕಾಗಿ, ಶಕ್ತಿ ಭದ್ರತೆಯು ಜಗತ್ತಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿರುವ ಕಾರಣ ಜಾಗತಿಕ ಬೆಳವಣಿಗೆಗಾಗಿ ಇದು ಅತ್ಯಂತ ನಿರ್ಣಾಯಕವಾಗಿದೆ. ಆದ್ದರಿಂದಲೇ ಶಕ್ತಿ ಮಾರುಕಟ್ಟೆಯಲ್ಲಿ ಸ್ಥಿರತೆಯನ್ನು ಖಾತ್ರಿಪಡಿಸುವುದಕ್ಕಾಗಿ ಶಕ್ತಿಯ ಪೂರೈಕೆ ಮೇಲೆ ಯಾವುದೇ ನಿರ್ಬಂಧನೆಗಳ ಹೇರಿಕೆಯನ್ನು ಭಾರತ ವಿರೋಧಿಸುತ್ತದೆ.

ಶಕ್ತಿ ಪರಿವರ್ತನೆಗಾಗಿ ಭಾರತದ ಪತಿಪಾದನೆಯು ದೇಶದಲ್ಲಿನ ಶಕ್ತಿಯಲ್ಲಿ ಸ್ಥಿರತೆ ಕಾಣಲು ನವೀಕರಿಸಬಹುದಾದ ಸಂಪನ್ಮೂಲಗಳ ಪಾಲನ್ನು ಹೆಚ್ಚಿಸುವ ಸರ್ಕಾರದ ಅನೇಕ ನವೀನ ಉಪಕ್ರಮಗಳೊಂದಿಗೆ ಹೆಚ್ಚು ಶಕ್ತಿ ಹಾಗೂ ವಿಶ್ವಾಸಾರ್ಹತೆಯನ್ನು ಪಡೆದುಕೊಂಡಿದೆ. ಭಾರತವು

ವಾಣಿಜ್ಯ ಮತ್ತು ಕೈಗಾರಿಕಾ ಗ್ರಾಹಕರಿಗೆ ವಿದ್ಯುತ್ ನ ಹಸಿರು ಮೂಲಗಳಿಗೆ ಬದಲಾಗುವ ನಿಯಮಗಳನ್ನು ಸಡಿಲಿಸುವ ಮೂಲಕ ತನ್ನ ಪಳೆಯುಳಿಕೆ ಇಂಧನ-ಚಾಲಿತ ಆರ್ಥಿಕತೆಯನ್ನು ವೇಗಗೊಳಿಸಿದೆ. ಭಾರತವು 30% ಜಾಗತಿಕ ಹೊರಸೂಸುವಿಕೆಗಳಿಗೆ ಕಾರಣವಾಗಿರುವ ದೂರದ ಸಾರಿಗೆ ವಲಯಗಳು ಮತ್ತು ಭಾರಿ ಉದ್ಯಮವನ್ನು ಡಿಕಾರ್ಬೊನೈಸ್ ಮಾಡುವ ಉದ್ದೇಶವಿರುವ ಜಾಗತಿಕ ಉಪಕ್ರಮವಾಗಿರುವ, ಫಸ್ಟ್ ಮೂವರ್ಸ್ ಕಾಯಲಿಷನ್ ಸೇರಿಕೊಂಡಿದೆ.

ಭಾರತ ಫ್ರಾನ್ಸ್ ಜೊತೆಗೆ, ಅಂತರರಾಷ್ಟ್ರೀಯ ಸೌರ ಮೈತ್ರಿಯನ್ನು (ISA) ಆರಂಭಿಸಿದ್ದು, ಇದು "ಒಂದು ಸೂರ್ಯ, ಒಂದು ಜಗತ್ತು, ಒಂದು ಜಾಲ"ದ ಕಡೆಗೆ ಕಾರ್ಯನಿರ್ವಹಿಸುತ್ತದೆ. ISA ಸೌರ ಶಕ್ತಿಯ ಉತ್ಪಾದನೆಯನ್ನು ಉತ್ತೇಜಿಸಲು ಉದ್ದೇಶಿಸಿರುವ ಈ ಮೈತ್ರಿಯನ್ನು 100ಕ್ಕೂ ಹೆಚ್ಚಿನ ದೇಶಗಳು ಸೇರಿಕೊಂಡಿದ್ದು, ಇದನ್ನು ಒಂದು ಜಾಗತಿಕ ಸೌರ ಅಭಿಯಾನವಾಗಿಸಿದೆ.

ಶಕ್ತಿ ಪರಿವರ್ತನೆಯನ್ನು ಸುಧಾರಿಸಲು, ಭಾರತ ಸ್ವಚ್ಛ, ಸುಸ್ಥಿರ ಮತ್ತು ಕಡಿಮೆ ಬೆಲೆಯ ಶಕ್ತಿ ಪರಿವರ್ತನೆಯನ್ನು ಖಾತ್ರಿಪಡಿಸಲು ಮತ್ತು ತೀವ್ರಗೊಳಿಸಲು ಶಕ್ತಿ ವ್ಯವಸ್ಥೆಗಳ ರೂಪಾಂತರ ಮತ್ತು ವೈವಿಧ್ಯೀಕರಣವನು ಬೆಂಬಲಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ವಿಶೇಷವಾಗಿ ಹೆಚ್ಚು ದುರ್ಬಲ ದೇಶಗಳಿಗೆ ಶಕ್ತಿ ವಲಯದಲ್ಲಿ ಹಣಕಾಸಿನ ನೆರವು ಮತ್ತು ಪರಸ್ಪರ ಪ್ರಯೋಜನಕಾರಿ ತಂತ್ರಜ್ಞಾನ ಸಹಕಾರ, ಸಾರ್ವಜನಿಕ ವಲಯದಲ್ಲಿ ಕಡಿಮೆ ಬೆಲೆಯ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಶಕ್ತಿ, ಸಾಮರ್ಥ್ಯ ನಿರ್ಮಾಣ, ಅಗ್ಗದ ನವೀನ ತಂತ್ರಜ್ಞಾನವನ್ನು ಒದಗಿಸುವತ್ತ ನಿರಂತರ ಬೆಂಬಲವನ್ನು ಪ್ರತಿಪಾದಿಸುತ್ತದೆ.

ಮುಂದುವರೆಯುತ್ತಾ, ಉದ್ಯಮ ಮತ್ತು ವಿದ್ಯುತ್ ಶಕ್ತಿಯ ಬಳಕೆದಾರರಲ್ಲಿ ಸೌರ ಶಕ್ತಿಯ ಬಳಕೆಯನ್ನು ಹೆಚ್ಚಿಸಲು ಅದನ್ನು ಹೆಚ್ಚು ಅಗ್ಗ ಮಾಡುವುದಕ್ಕಾಗಿ ಮತ್ತು ಸೌರ ಶಕ್ತಿಯ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಭಾರತ ISA ಅನ್ನು ನಿಯಂತ್ರಿಸುತ್ತದೆ. ನವೀಕರಿಸಬಹುದಾದ ಸಂಪನ್ಮೂಲಗಳ ಕಡೆಗೆ ಶಕ್ತಿ ಪರಿವರ್ತನೆ ಮತ್ತು ಹಸಿರು ಬೆಳವಣಿಗಾಗಿ ಸೌರ ಶಕ್ತಿಯ ಬಳಕೆಯನ್ನು ಹೆಚ್ಚಿಸಲು ಭಾರತ ಒತ್ತು ನೀಡುತ್ತದೆ. ಭಾರತದ ದೃಷ್ಟಿಯಲ್ಲಿ, ಸೌರ ಶಕ್ತಿಯು ಭವಿಷ್ಯದ ನವೀಕರಿಸಬಹುದಾದ ಶಕ್ತಿಯಾಗಿದೆ, ಇದು ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಗಣನೀಯವಾಗಿ ಕಡಿಮೆಮಾಡುತ್ತದೆ. ಜಿ20 ಅಧ್ಯಕ್ಷತೆಯ ಅಡಿಯಲ್ಲಿ, ಭಾರತ ತಂತ್ರಜ್ಞಾನ ಹಾಗೂ ಮಾಹಿತಿ ವರ್ಗಾವಣೆಯ ಮೂಲಕ ಶಕ್ತಿ ಪರಿವರ್ತನೆಯನ್ನು ಉತ್ತೇಜಿಸುತ್ತದೆ. ಮುಂಬರುವ ದಿನಗಳಲ್ಲಿ ಸೌರ ಶಕ್ತಿ ಮತ್ತು ನವೀಕರಿಸಬಲ್ಲ ತಂತ್ರಜ್ಞಾನಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸಲು ಅಂತರರಾಷ್ಟ್ರೀಯ ಸಹಕಾರವನ್ನು ವೃದ್ಧಿಸುವುದು ಭಾರತದ ಪ್ರಮುಖ ಆದ್ಯತೆಯಾಗಿರುತ್ತದೆ.

# LiFE: ಪರಿಸರ-ಸ್ನೇಹಿ ಜೀವನಶೈಲಿ ಉತ್ತೇಜಿಸುವುದು

LiFE
Lifestyle For Environment

ಜಗತ್ತಿನಾದ್ಯಂತ ಜಾಗತಿಕ ತಾಪಮಾನವು ತನ್ನ ಪ್ರಕೋಪವನ್ನು ತೋರಿಸುವುದನ್ನು ಮುಂದುವರೆಸುವುದರೊಂದಿಗೆ ಹವಾಮಾನದಲ್ಲಿ ವಿಪರೀತ ಬದಲಾವಣೆಗಳಾಗಿವೆ. ನದಿಗಳು ಬತ್ತುತ್ತಿವೆ, ಹಿಮನದಿಗಳು ಕರಗುತ್ತಿವೆ, ಮತ್ತು ಜಗತ್ತಿನ ಅನೇಕ ಪ್ರದೇಶಗಳು ಹಿಂದೆಂದೂ ಕಾಣದ ತಾಪಮಾನವನ್ನು ಅನುಭವಿಸುತ್ತಿವೆ, ಪ್ರಪಂಚದಲ್ಲಿ ಹೆಚ್ಚಿನ ನೋವುಗಳು ಉಂಟಾಗುತ್ತಿವೆ. ಪ್ರವಾಹ, ಬರ ಮತ್ತು ಸುಂಟರಗಾಳಿ ರೀತಿಯ ಹವಾಮಾನ ವೈಪರೀತ್ಯಗಳು ನಮ್ಮ ಇರುವಿಕೆಯನ್ನು ಅಂಚಿಗೆ ತರುತ್ತಿದೆ. ಹವಾಮಾನದ ವೈಪರೀತ್ಯದ ವಿರುದ್ಧ, ಭಾರತವು ಸುಸ್ಥಿರ ಮತ್ತು ಆರೋಗ್ಯಕರ ಜೀವನಶೈಲಿಗಾಗಿ 'LiFE-ಪರಿಸರಕ್ಕಾಗಿ ಜೀವನ' ಎನ್ನುವ ನಮ್ಮ ದೇಶದ ಒಂದು ಉಪಕ್ರಮವನ್ನು ಆರಂಭಿಸಿದೆ. ಇದನ್ನು ಜಿ20 ಒಳಗೊಂಡಂತೆ ಜಾಗತಿಕ ಕಾರ್ಯಸೂಚಿಯಾಗಿ ಪ್ರಸ್ತುತಪಡಿಸುತ್ತದೆ. ಈ ಪರಿಕಲ್ಪನೆಯನ್ನು ನವೆಂಬರ್ 1, 2021 ರಂದು ಗ್ಲಾಸ್ಗೋನಲ್ಲಿ ನಡೆದ COP26 ವಾರ್ಷಿಕ ಜಾಗತಿಕ ಹವಾಮಾನ ಶೃಂಗಸಭೆಯಲ್ಲಿ ಭಾರತದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಅನಾವರಣಗೊಳಿಸಿದರು. ಪರಿಸರವನ್ನು ಸಂರಕ್ಷಿಸಲು ಮತ್ತು ರಕ್ಷಿಸಲು 'ವಿವೇಚನೆ ರಹಿತ ಮತ್ತು ವಿನಾಶಕಾರಿ ಬಳಕೆಯ' ಬದಲಾಗಿ "ವಿವೇಚನೆಪೂರ್ವಕ ಮತ್ತು ಉದ್ದೇಶಪೂರ್ವಕ ಬಳಕೆಯ ಕಡೆಗೆ LiFEಅನ್ನು ಅಂತರರಾಷ್ಟ್ರೀಯ ಸಾಮೂಹಿಕ ಅಭಿಯಾನವನ್ನಾಗಿಸಬೇಕೆಂದು ಜಾಗತಿಕ ಸಮುದಾಯದಲ್ಲಿ ಪ್ರಧಾನ ಮಂತ್ರಿ ಮೋದಿಯವರು ಕರೆ ನೀಡಿದರು.

“ಗ್ರಹದ, ಗ್ರಹಕ್ಕಾಗಿ ಮತ್ತು ಗ್ರಹದಿಂದ ಜೀವನಶೈಲಿ” ಅನುಸರಿಸುವ ಮೂಲಕ ಹವಾಮಾನದ ಬದಲಾವಣೆಯ ವಿರುದ್ಧ ಹೋರಾಡುವಂತೆ ಓರ್ವ ವ್ಯಕ್ತಿಯನ್ನು LiFE ಸೂಚಿಸುತ್ತದೆ. ಸಂಕೀರ್ಣ ಬೃಹತ್ ಚರ್ಚೆಗಳು, ಸರ್ಕಾರ ಮತ್ತು ಅಂತರರಾಷ್ಟ್ರೀಯ ಏಜೆನ್ಸಿಗಳ ನಿಯಮಗಳನ್ನು ಬಿಟ್ಟು, ಹಸಿರುಮನೆ ಅನಿಲ ಹೊರಸೂಸುವಿಕೆಗಳನ್ನು ನಿಯಂತ್ರಿಸಲು ಕಚೇರಿಗಳಿಗೆ ಅಥವಾ ಜಿಮ್ ಗಳಿಗೆ ಹೋಗಲು ಸೈಕಲ್ ಬಳಸುವಂತಹ ಜೀವನಶೈಲಿಯಲ್ಲಿನ ಸಣ್ಣ ಪುಟ್ಟ ಬದಲಾವಣೆಗಳನ್ನು ಮಾಡುವಂತೆ LiFE ಪ್ರೋತ್ಸಾಹಿಸುತ್ತದೆ. ಆಳವಾಗಿ ಬೇರೂರಿರುವ ವ್ಯಕ್ತಿ ಮತ್ತು ಸಮುದಾಯದ ನಡವಳಿಕೆಯನ್ನು ಬದಲಾಯಿಸುವ ಮೂಲಕ ಮಾತ್ರ ಪರಿಸರ ಮತ್ತು ಹವಾಮಾನ ಬಿಕ್ಕಟ್ಟುಗಳಲ್ಲಿ ವ್ಯತ್ಯಾಸವನ್ನು ತರಬಹುದು ಎಂದು LiFE ನಂಬಿಕೆ ಇರಿಸಿದೆ. ವಿಶ್ವ ಸಂಸ್ಥೆ ಪರಿಸರ ಕಾರ್ಯಕ್ರಮ(UNEP) ಪ್ರಕಾರ, ಜಾಗತಿಕ ಜನಸಂಖ್ಯೆಯ ಎಂಟು ಬಿಲಿಯನ್ ಜನರಲ್ಲಿನ ಒಂದು ಬಿಲಿಯನ್ ನಷ್ಟು ಜನರು ತಮ್ಮ ದಿನನಿತ್ಯದ ಜೀವನಗಳಲ್ಲಿ ಪರಿಸರ-ಸ್ನೇಹಿ ಆಚರಣೆಗಳನ್ನು ಅಭ್ಯಸಿಸಿದರೆ, ಜಾಗತಿಕ ಇಂಗಾಲ ಹೊರಸೂಸುವಿಕೆಗಳು ಅಂದಾಜು ಶೇಖಡಾ 20%ರಷ್ಟು ತಗ್ಗಿಸಬಹುದು. ಈ ಹೊಸ ಯೋಜನೆಯ ಅಡಿಯಲ್ಲಿ, ಅಂತಹ ಜೀವನಶೈಲಿಯನ್ನು ಅನುಸರಿಸುವವರನ್ನು LiFE ಅಡಿಯಲ್ಲಿ ಗ್ರಹ ಪರ ಜನರು ಎಂದು ಗುರುತಿಸಲಾಗುತ್ತದೆ.

ಸುಸ್ಥಿರ ಜೀವನಶೈಲಿಯನ್ನು ಉತ್ತೇಜಿಸುವ ತಮ್ಮ ಮಿಷನ್ ನಲ್ಲಿ ಹೊಸ ಜೀವನದ ಉಸಿರನ್ನು ಉಸಿರಾಡುವ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು, ಯುಎನ್ ಸೆಕ್ರೆಟರಿ-ಜನರಲ್ ಅಂಟೋನಿಯೋ ಗುಟ್ಟೇರ್ಸ್ ಉಪಸ್ಥಿತಿಯಲ್ಲಿ ಬೃಹತ್ ಏಕತೆಯ ಪ್ರತಿಮೆಗೆ(ಸ್ಟ್ಯಾಚು ಆಫ್ ಯುನಿಟಿ) ಪ್ರಖ್ಯಾತಿಯಾಗಿರುವ ಗುಜರಾತಿನ ನಗರ ಕೆವಾಡಿಯಾದಲ್ಲಿ “ಮಿಷನ್ LiFE” ಆರಂಭಿಸಿದರು. ಪಿಎಂ ಮೋದಿ ಪ್ರಕಾರ ಮಿಷನ್ LiFE, ಪ್ರತಿ ವ್ಯಕ್ತಿಯ ಸಾಮರ್ಥ್ಯದಂತೆ ಪ್ರತಿಯೊಬ್ಬರ ಕೊಡುಗೆಯೊಂದಿಗೆ ಹವಾಮಾನ ಬದಲಾವಣೆಯ ವಿರುದ್ಧದ ಹೋರಾಟದ ಪ್ರಜಾಸತ್ತಾತ್ಮಕವಾಗಿಸುತ್ತದೆ. ಗ್ರಹ ಪರ ಜನರ ಪರಿಕಲ್ಪನೆಯನ್ನು ‘ಮಿಷನ್ LiFE’ ಬಲಪಡಿಸುತ್ತದೆ ಎಂದು ಒತ್ತಿಹೇಳುವುದರೊಂದಿಗೆ ಪ್ರಧಾನ ಮಂತ್ರಿ ಮೋದಿಯವರು ಇದು ಪಿ3 ಮಾದರಿಯನ್ನು ಅಂದರೆ ಪ್ರೋ-ಪ್ಲಾನೆಟ್ ಪೀಪಲ್(ಗ್ರಹ ಪರ ಜನರು)ನ ಚೈತನ್ಯವನ್ನು ಬಲಪಡಿಸುತ್ತದೆ ಎಂದು ವಿಶ್ವಾಸ ಇಟ್ಟಿದ್ದಾರೆ. ಭಾರತದ ಸಂಪ್ರದಾಯಗಳು ಮತ್ತು ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿರುವ ಪುನರ್ಬಳಕೆ, ಕಡಿಮೆ ಬಳಕೆ ಮತ್ತು ಮರುಬಳಕೆ ಸಹ ಮಿಷನ್ LiFE ನ ಭಾಗವಾಗಿದೆ ಏಕೆಂದರೆ ಇದು ಸುಸ್ಥಿರ ಆಯ್ಕೆಗಳನ್ನು ಮಾಡಲು ಜನರನ್ನು ಉತೇಜಿಸುತ್ತದೆ.

LiFE ಕಾರ್ಯ ಯೋಜನೆಗಳಲ್ಲಿ ಜನರು ತಮ್ಮ ದೈನಂದಿನ ಜೀವನದಲ್ಲಿ ಸರಳವಾದ ಆದರೆ ಪರಿಣಾಮಕಾರಿ ಪರಿಸರ-ಸ್ನೇಹಿ ಚಟುವಟಿಕೆಗಳನ್ನು ಅಭ್ಯಾಸ ಮಾಡಲು ಪ್ರೋತ್ಸಾಹಿಸುವುದು(ಬೇಡಿಕೆ), ಬದಲಾಗುತ್ತಿರುವ ಬೇಡಿಕೆಗೆ (ಪೂರೈಕೆ) ತ್ವರಿತವಾಗಿ ಪ್ರತಿಕ್ರಿಯಿಸಲು ಕೈಗಾರಿಕೆಗಳು ಮತ್ತು ಮಾರುಕಟ್ಟೆಗಳನ್ನು ಸಕ್ರಿಯಗೊಳಿಸುವುದು ಮತ್ತು ಸುಸ್ಥಿರ ಬಳಕೆ ಮತ್ತು ಉತ್ಪಾದನೆ ಎರಡನ್ನೂ ಬೆಂಬಲಿಸಲು ಸರ್ಕಾರ ಮತ್ತು ಕೈಗಾರಿಕಾ ನೀತಿಯ ಮೇಲೆ ಪ್ರಭಾವ ಬೀರುವುದು ಒಳಗೊಂಡಿದೆ.

ಜಾಗತಿಕ ಆರೋಗ್ಯಕ್ಷೇಮಕ್ಕಾಗಿ ಪರಿವರ್ತಕ ಸಾಮರ್ಥ್ಯವುಳ್ಳ LiFE ನೀಡಿದರೂ ಸಹ, ಭಾರತ ಜಿ೨೦ ಕಾರ್ಯಸೂಚಿಯ ಮೇಲೆ ಸುಸ್ಥಿರ ಜೀವನಶೈಲಿಯನ್ನು ಇರಿಸಿದೆ. ಜಿ೨೦ ಜಾಗತಿಕ ಜಿಡಿಪಿಯ ಶೇಖಡಾ ೮೦%ರಷ್ಟನ್ನ ಹೊಂದಿರುವ ಜೊತೆಯಲ್ಲಿ ಜಾಗತಿಕ ಹಸಿರುಮನೆ ಹೊರಸೂಸುವಿಕೆಗಳ ಶೇಕಡಾ ೮೦%ರಷ್ಟನ್ನು ಹೊಂದಿದೆ. ಭಾರತದ ದೃಷ್ಟಿಯಲ್ಲಿ, ಹಸಿರು ಜೀವನಶೈಲಿಗಾಗಿ LiFEಅನ್ನು ಜಾಗತಿಕ ಅಭಿಯಾನವನ್ನಾಗಿಸಲು ಜಿ೨೦ ಸಮರ್ಥವಾಗಿದೆ. ಹವಾಮಾನ ಬದಲಾವಣೆಯ ವಿರುದ್ಧ ಜಗತ್ತು ಹೋರಾಡಲು ಮಿಷನ್ LiFE ಸಹಾಯ ಮಾಡುತ್ತದೆ ಮತ್ತು ಯುಎನ್ ನಿಗದಿಪಡಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಸುಸ್ಥಿರ ಜೀವನದ ವಿಧಾನಕ್ಕೆ ಅವಕಾಶಮಾಡಿಕೊಡುತ್ತದೆ. ಇದಕ್ಕೆ ಸಂಬಂಧಿಸಿದಂತೆ ನವೆಂಬರ್ 15, 2022ರಂದು ಬಾಲಿಯಲ್ಲಿ ನಡೆದ ಜಿ೨೦ ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ಮೋದಿಯವರು ತಮ್ಮ ಪ್ರತಿಕ್ರಿಯೆಯಲ್ಲಿ LiFEನ ಪ್ರಾಮುಖ್ಯತೆಯನ್ನು ತಿಳಿಸಿದರು. “ಗ್ರಹದ ಸುರಕ್ಷಿತ ಭವಿಷ್ಯಕ್ಕಾಗಿ, ಟ್ರಸ್ಟಿಶಿಪ್ ಅರಿವು ಮಾತ್ರ ಪರಿಹಾರವಾಗಿದೆ. LiFE ಅಭಿಯಾನವು ಇದಕ್ಕೆ ದೊಡ್ಡ ಕೊಡುಗೆಯಾಗಬಹುದು. ಸುಸ್ಥಿರ ಜೀವನಶೈಲಿಗಳನ್ನು ಸಾಮೂಹಿಕ ಚಳುವಳಿಯನ್ನಾಗಿಸುವುದು ಇದರ ಉದ್ದೇಶವಾಗಿದೆ”. ಹವಾಮಾನ ವೈಪರೀತ್ಯದ ಕುರಿತಾಗಿ ಜಾಗತಿಕ ಚರ್ಚೆಯನ್ನು ಬದಲಿಸುವ ಭಾರತದ ಪ್ರಯತ್ನಗಳನ್ನು ಗುರುತಿಸುವ ನಿಟ್ಟಿನಲ್ಲಿ, ಜಿ೨೦ ಬಾಲಿ ನಾಯಕರ ಘೋಷಣೆಯು ಸುಸ್ಥಿರ ಅಭಿವೃದ್ಧಿ ಮತ್ತು ಜೀವನಶೈಲಿ, ಸಂಪನ್ಮೂಲ ದಕ್ಷತೆ ಮತ್ತು ದುಂಡಾದ ಆರ್ಥಿಕತೆಯ ಪರಿಕಲ್ಪನೆಯನ್ನು ಅನುಮೋದಿಸಿದೆ.

ಜಿ೨೦ಯಾ ಭಾರತದ ಅಧ್ಯಕ್ಷತೆಯ ಅಡಿಯಲ್ಲಿ, ಅಂತರರಾಷ್ಟ್ರೀಯ ಸಮುದಾಯದಿಂದ ಮತ್ತು ಭಾರತದಲ್ಲಿ ಆರೋಗ್ಯಕರ ಹಸಿರು ಜೀವನಶೈಲಿಗಾಗಿ ಬಯಸುವ ಜನರಿಂದ ಬೆಂಬಲವನ್ನು ಪಡೆಯುವುದರಿಂದ LiFE ಹೆಚ್ಚುವರಿ ವೇಗವನ್ನು ಪಡೆದುಕೊಳ್ಳುತ್ತದೆ. ಮುಂಬರುವ ತಿಂಗಳುಗಳಲ್ಲಿ, ಹವಾಮಾನ ವೈಪರೀತ್ಯಗಳ ವಿರುದ್ಧ ಹೋರಾಡಲು LiFE ಜಾಗತಿಕ ಮಂತ್ರವಾಗಲು ಸಿದ್ಧವಾಗಿದೆ. ಹಸಿರು ಪರಿವರ್ತನೆಗಾಗಿ “ವಸುದೈವ ಕುಟುಂಬಕಮ್” ನ ಆಧ್ಯಾತ್ಮಿಕ ಆದರ್ಶವನ್ನು ಸಂಯೋಜಿಸಿದ ಭಾರತದ ಉಪಕ್ರಮವನ್ನು ಹೊಗಳಿದ ಜಗತ್ತಿನ ನಾಯಕರುಗಳಿಂದ ಮಿಷನ್ LiFE ಉತ್ಸಾಹಭರಿತ ಪ್ರತಿಕ್ರಿಯೆಯನ್ನು ಪಡೆದುಕೊಂಡಿದೆ. ಭಾರತದ ಜಿ೨೦ ಅಧ್ಯಕತೆಯ ಧ್ಯೇಯವು -”ಒಂದು ಭೂಮಿ ಒಂದು ಗ್ರಹ ಒಂದು ಭವಿಷ್ಯ” - ಪ್ರೋ-ಲೈಫ್ ಪ್ಲಾನೆಟ್ ಅಂಡ್ ಪೀಪಲ್ ನ ಸಾರವನ್ನು ಒಳಗೊಂಡಿದೆ. ಮಿಷನ್ LiFE ಗ್ರಹವನ್ನು ಉಳಿಸಲು ಪ್ರಜೆಗಳಿಗೆ ಮತ್ತು ಸರ್ಕಾರಗಳಿಗೆ ಕ್ರಮವನ್ನು ತೆಗೆದುಕೊಳ್ಳುವ ಕರೆಯಾಗಿದೆ.




# ಬ್ರಿಡ್ಜಿಂಗ್ ದಿ ಡಿವೈಡ್: ಡಿಜಿಟಲ್ ಸಾರ್ವಜನಿಕ ಸರಕುಗಳು

ಕೋವಿಡ್ ನಂತರದ ಜಗತ್ತಿನಲ್ಲಿ ಡಿಜಿಟಲ್ ಪರಿವರ್ತನೆ ಬಹಳ ಸಾಮಾನ್ಯ ಸಂಗತಿಯಾಗಿದೆ. ಕೋವಿಡ್-19 ಬಂದಾಗ, ನಮ್ಮ ತರಗತಿ, ನಮ್ಮ ಕಾರ್ಯಸ್ಥಳ, ಮೀಟಿಂಗ್ ಸ್ಥಳ ಮತ್ತು ಆಯ್ದ ವೇದಿಕೆಗಳಿಗಾಗಿ ಅಂತರ್ಜಾಲ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳುವ ಸಾಧನವಾಯಿತು. ಡಿಜಿಟಲ್ ಪರಿವರ್ತಕ ಸಾಮರ್ಥ್ಯವನ್ನು ಪರಿಗಣಿಸುತ್ತಾ, ಇಡೀ ಜಗತ್ತಿನಾದ್ಯಂತ ಡಿಜಿಟಲ್ ಪರಿವರ್ತಕವನ್ನು ವೇಗಗೊಳಿಸುವುದು ಮುಂಬರುವ ತಿಂಗಳುಗಳಲ್ಲಿನ ಭಾರತದ ಜಿ20 ಅಧ್ಯಕ್ಷತೆ ಮತ್ತು ರಾಜತಾಂತ್ರಿಕ ಪ್ರಭಾವದ ಪ್ರಮುಖ ಅಂಶಗಳಾಗಿವೆ. ಈ ಡಿಜಿಟಲ್ ಪರಿವರ್ತನೆಯು ಡಿಜಿಟಲ್ ಆರ್ಥಿಕತೆ, ಡಿಜಿಟಲ್ ಹಣಕಾಸು. ಡಿಜಿಟಲ್ ಸರ್ಕಾರ, ಡಿಜಿಟಲ್ ಆರೋಗ್ಯ ಮತ್ತು ಡಿಜಿಟಲ್ ಶಿಕ್ಷಣವನ್ನು ಒಳಗೊಳ್ಳುತ್ತದೆ.

ಬಡತನ ಮತ್ತು ಹವಾಮಾನ ಬದಲಾವಣೆಗಳ ವಿರುದ್ಧ ಹೋರಾಡಲು ಸಹ ಡಿಜಿಟಲ್ ತಂತ್ರಜ್ಞಾನದ ಸಹಾಯ ಪಡೆದುಕೊಳ್ಳಬಹುದು. ಈ ಹಿನ್ನಲೆಯಲ್ಲಿ, 2014ರಲ್ಲಿದ್ದ ಶೇಖಡಾ 50% ರಷ್ಟು ಬ್ಯಾಂಕ್ ಖಾತೆಗಳಿಗೆ ಹೋಲಿಸಿದರೆ ಸದ್ಯದ ಶೇಖಡಾ 80% ಕ್ಕಿಂತ ಹೆಚ್ಚಿನ ಭಾರತೀಯರು ಹೊಂದಿರುವ ಬ್ಯಾಂಕ್ ಖಾತೆಗಳ ಡಿಜಿಟಲ್ ಪರಿವರ್ತನೆಯ ಕಥೆಯನ್ನು ಹೇಳುವ ಮೂಲಕ ಭಾರತ ಮಾರ್ಗವನ್ನು ತೋರಿಸಬಹುದು ಮತ್ತು ಈ ಕ್ಷೇತ್ರದಲ್ಲಿನ ಅನುಭವವನ್ನು ಅಭಿವೃದ್ಧಿ ಹೊಂದಿದ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಂದಿಗೆ ಹಂಚಿಕೊಳ್ಳಬಹುದು.

ಭಾರತವು ಸಾಮಾಜಿಕ-ಆರ್ಥಿಕ ಪರಿವರ್ತನೆಯ ವೇಗವರ್ಧಕವಾಗಲು ಡಿಜಿಟಲ್ ನಿರ್ಮಾಣದ ಅಂತರ್ಗತಗೊಳಿಸುವುದರ ಕಡೆಗೆ ಗಮನ ಹರಿಸುತ್ತಿದೆ. ಆಡಳಿತದಲ್ಲಿ ಆದರ್ಶಕತೆಯನ್ನು ಉತ್ತೇಜಿಸುವುದನ್ನೂ ಒಳಗೊಂಡಂತೆ ನಿರ್ಣಯಾತ್ಮಕ ಕ್ಷೇತ್ರಗಳಲ್ಲಿ ವೇಗ ಮತ್ತು ಎತ್ತರವನ್ನು ಸಾಧಿಸಲು ಡಿಜಿಟ ಪರಿವರ್ತನೆ ಪ್ರಮುಖ ಕೀಲಿಯಾಗಿದೆ. ಭಾರತ ಅಭಿವೃದ್ಧಿಪಡಿಸಿದ ಡಿಜಿಟಲ್ ಸಾರ್ವಜನಿಕ ಸರಕುಗಳ ನಿರ್ಮಾಣವು ಅಂತರ್ನಿರ್ಮಿತ ಪ್ರಜಾಪ್ರಭುತ್ವದ ತತ್ವಗಳೊಂದಿಗೆ ಅಂತರ್ಗತವಾಗಿದೆ. ಈ ಪರಿಹಾರಗಳು ಓಪನ್ ಸೋರ್ಸ್, ಓಪನ್ ಎಪಿಐ ಗಳು, ಓಪನ್ ಸ್ಟ್ಯಾಂಡರ್ಡ್ ಗಳನ್ನು ಆಧರಿಸಿದ್ದು, ಇವು ಸಾರ್ವಜನಿಕ ಮತ್ತು ಅಂತರ್-ಕಾರ್ಯಸಾಧ್ಯತೆಯೊಂದಿಗೆ ಇರುತ್ತದೆ. ಭಾರತವು ಮೊದಲು ಆರಂಭಿಸಿದ ಯುನಿಫೈಡ್ ಪೇಮೆಂಟ್ ಇಂಟರ್ಫೇಸ್(UPI), ಡಿಜಿಟಲ್ ಸಾರ್ವಜನಿಕ ಸರಕುಗಳ ಅತ್ಯುತ್ತಮ ಉದಾಹರಣೆಯಾಗಿದೆ. ಕಳೆದ ವರ್ಷ, ಜಗತ್ತಿನ ರಿಯಲ್-ಟೈಮ್ ಪಾವತಿ ವಹಿವಾಟುಗಳ ಶೇಖಡಾ 40% ಕ್ಕಿಂತಲೂ ಅಧಿಕ ವಹಿವಾಟುಗಳು ಯುಪಿಐ ಮೂಲಕ ಜರುಗಿದವು. ಅದೇ ರೀತಿಯಾಗಿ, ಡಿಜಿಟಲ್ ಗುರುತಿಗಾಗಿ 460 ಮಿಲಿಯನ್ ಬ್ಯಾಂಕ್ ಖಾತೆಗಳನ್ನು ತೆರೆಯಲಾಯಿತು. ಇದರಿಂದ ಇಂದು ಭಾರತ ಆರ್ಥಿಕ ಒಳಗೊಳ್ಳುವಿಕೆಯಲ್ಲಿ ಜಾಗತಿಕ ನಾಯಕನಾಗಿ ಹೊರಹೊಮ್ಮಿದೆ. ಮಾನವ ಇತಿಹಾಸದಲ್ಲಿ ಭಾರತದ ಓಪನ್ ಸೋರ್ಸ್ CoWIN ವೇದಿಕೆಯನ್ನು ಅತಿ ದೊಡ್ಡ ಲಸಿಕಾ ಅಭಿಯಾನವೆಂದು ಪರಿಗಣಿಸಲಾಯಿತು.

“ಆಧಾರ್, ದೀಕ್ಷಾ, ಸ್ವಯಂ ಭಾರತ ವರ್ಷಗಳಾದ್ಯಂತ ನಿರ್ಮಿಸಿದ ಸಾರ್ವಜನಿಕ ಡಿಜಿಟಲ್ ಮೂಲಸೌಕರ್ಯದ ಪ್ರಮುಖ ಅಂಶಗಳಾಗಿವೆ.” ಭಾರತ ULIP(ಯುನಿಫೈಡ್ ಲಾಜಿಸ್ಟಿಕ್ಸ್ ಇಂಟರ್ಫೇಸ್ ಪ್ಲಾಟ್ಫಾರ್ಮ್) ಮುನ್ನಡೆಸಬೇಕಾಗಿದೆ ಮತ್ತು ONDC(ಓಪನ್ ನೆಟ್ವರ್ಕ್ ಫಾರ್ ಡಿಜಿಟಕ್ ಕಾಮರ್ಸ್) ನಿರ್ಮಿಸುವ ಪ್ರಕ್ರಿಯೆಯಲ್ಲಿದೆ.

ಭಾರತ ಸಾರ್ವಜನಿಕರಿಗೆ ಡಿಜಿಟಲ್ ಪ್ರವೇಶ ಸೌಲಭ್ಯವನ್ನು ಒದಗಿಸುತ್ತಿದ್ದರೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಾಮೂಹಿಕ ಡಿಜಿಟಲ್ ವಿಭಜನೆ ನಡೆಯುತ್ತಿದೆ. ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಜನರಿಗೆ ಯಾವುದೇ ರೀತಿಯ ಡಿಜಿಟಲ್ ಗುರುತುಗಳಿಲ್ಲ. ಕೇವಲ 50ರಾಷ್ಟ್ರಗಳಲ್ಲಿ ಮಾತ್ರ ಡಿಜಿಟಲ್ ಪಾವತಿ ವ್ಯವಸ್ಥೆಗಳಿವೆ. ಇದಕ್ಕೆ ಸಂಬಂಧಿಸಿದಂತೆ, ಭಾರತವು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಡಿಜಿಟಲ್ ಪರಿವರ್ತನೆಯನ್ನು ತರಲು ಪ್ರಯತ್ನಿಸುತ್ತದೆ, ಆಗ ಯಾವುದೇ ವ್ಯಕ್ತಿಯು ಡಿಜಿಟಲ್ ತಂತ್ರಜ್ಞಾನದ ಲಾಭಗಳಿಂದ ವಂಚಿತನಾಗುವುದಿಲ್ಲ. ಬಾಲಿಯಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ

ಮಾತಾಡಿದ ಪ್ರಧಾನ ಮಂತ್ರಿ ಮೋದಿಯವರು ತನ್ನ ಜಿ20 ಅಧ್ಯಕ್ಷತೆ ಅಡಿಯಲ್ಲಿ, ಭಾರತ ಈ ಉದ್ದೇಶಕ್ಕಾಗಿಯೆಂದು ಜಿ20 ಪಾಲುದಾರರೊಂದಿಗೆ ಒಟ್ಟಾರೆಯಾಗಿ ಕೆಲಸಮಾಡುತ್ತದೆ ಎಂದರು.

"ಅಭಿವೃದ್ಧಿಗಾಗಿ ದತ್ತಾಂಶ" ತತ್ವವು ನಮ್ಮ ಅಧ್ಯಕ್ಷತೆಯ "ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ" ದ ಒಟ್ಟಾರೆ ವಿಷಯದ ಅವಿಭಾಜ್ಯ ಅಂಗವಾಗಿರುತ್ತದೆ.

ಭಾರತ ಬಡತನ, ಶಿಕ್ಷಣ, ಆರೋಗ್ಯ ಮತ್ತು ನೇರ ಪ್ರಯೋಜನಗಳ ವರ್ಗಾವಣೆಯ ಕುರಿತು ಸುಸ್ಥಿರ ಗುರಿಗಳನ್ನು ತಲುಪಲು ಡಿಜಿಟಲ್ ಪರಿವರ್ತನೆಯನ್ನು ಕೀಲಿಯಾಗಿ ನೋಡುತ್ತದೆ. ಭಾರತವು ಇತರ ಜಿ20 ದೇಶಗಳೊಂದಿಗೆ ಕಾರ್ಯನಿರ್ವಹಿಸುವ ಮೂಲಕ ಡಿಜಿಟಲ್ ಪರಿವರ್ತನೆಯ ಲಾಭಗಳು ಮಾನವ ಜನಾಂಗಕ್ಕೆ ಸಣ್ಣ ಭಾಗಕ್ಕೆ ಮಾತ್ರ ಸೀಮಿತವಾಗಿರದಂತೆ ಖಾತ್ರಿಪಡಿಸಿಕೊಳ್ಳುತ್ತದೆ.

ಭವಿಷ್ಯದಲ್ಲಿ, ಡಿಜಿಟಲ್ ಮತ್ತು ಹಸಿರು ಬೆಳವಣಿಗೆ ಬಹಳ ದೊಡ್ಡ ಅವಕಾಶಗಳಾಗಬಹುದು. "ಒಟ್ಟು 400 ಮಿಲಿಯನ್ ಜನರು ಡಿಜಿಟಲ್ ಗುರುತನ್ನು ಹೊಂದಿಲ್ಲ; 200 ಮಿಲಿಯನ್ ಜನರು ಬ್ಯಾಂಕ್ ಖಾತೆಯನ್ನು ಹೊಂದಿಲ್ಲ; 133 ದೇಶಗಳು ತ್ವರಿತ ಪಾವತಿಗಳನ್ನು ಹೊಂದಿಲ್ಲ. ಹಾಗಾಗಿ ಜಗತ್ತನ್ನು ಬದಲಿಸಲು ಇದು ಅತ್ಯಂತ ದೊಡ್ಡ ಅವಕಾಶವಾಗಿದೆ," ಎಂದು ಭಾರತದ ಜಿ20 ಶೆರ್ಪಾ ಶ್ರೀ. ಅಮಿತಾಭ್ ಕಾಂತ್ ಹೇಳಿದ್ದಾರೆ.



# ಹವಾಮಾನ ಹಣಕಾಸು: ಹಸಿರು ಬೆಳವಣಿಗೆಗೆ ಹಣಕಾಸು ಒದಗಿಸುವುದು

ಹಸಿರು ಪರಿವರ್ತನೆ ಮತ್ತು ಹಸಿರು ಅಭಿವೃದ್ಧಿಯನ್ನು ವೇಗಗೊಳಿಸಲು ಹವಾಮಾನ ಹಣಕಾಸು ಮಾಸ್ಟರ್ ಕೀಲಿಯಾಗಿದೆ. ಜಾಗತಿಕ ತಾಪಮಾನದ ಏರಿಕೆಯ ಪರಿಣಾಮಗಳ ಕುರಿತು ಹೆಚ್ಚು ಜಾಗೃತರಾಗುವುದರೊಂದಿಗೆ ಜಗತ್ತು ಅಭಿವೃದ್ಧಿ ಹೊಂದಿದ ದೇಶಗಳಿಂದ ಅಭಿವೃದ್ಧಿ ಹೊಂದುತ್ತಿರುವ ದೇಶಗಳವರೆಗೆ ಹವಾಮಾನ ಹಣಕಾಸಿನ ಸಮಯ ಸೀಮಿತ ಪೂರೈಕೆಯನ್ನು ಒದಗಿಸಲು ಪ್ರಯತ್ನಿಸುತ್ತಿದೆ. ಅಂತರರಾಷ್ಟ್ರೀಯ ಪರಿವಾರಗಳಲ್ಲಿ ಭಾರತ ನಿರಂತರವಾಗಿ ಹವಾಮಾನ ಹಣಕಾಸು ಒದಗಿಸಲು ಹೋರಾಡುತ್ತಾ ಬಂದಿದೆ ಏಕೆಂದರೆ ಇದು ಹಸಿರುಮನೆ ಅನಿಲಗಳ ಬೃಹತ್ ಹೊರಸೂಸುವಿಕೆಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳನ್ನು ದೂಷಿಸುತ್ತದೆ. ಈ ತರ್ಕದ ಆಧಾರದ ಮೇಲೆ, ಭಾರತ ಇತರ ಅಭಿವೃದ್ಧಿ ದೇಶಗಳೊಂದಿಗೆ, ಜಿ20ಯಲ್ಲಿ ಹಸಿರು ಪರಿವರ್ತನೆಗಾಗಿ ಹಣಕಾಸು ಒದಗಿಸಲು ಒತ್ತಡ ಹೇರುತ್ತದೆ. 2009 ರಲ್ಲಿ ಕೋಪನ್ ಹ್ಯಾಗನ್ ನಲ್ಲಿ ನಡೆದ COP15 ಜಾಗತಿಕ ಹವಾಮಾನ ಶೃಂಗಸಭೆಯಲ್ಲಿ, ಅಭಿವೃದ್ಧಿಹೊಂದಿದ ರಾಷ್ಟ್ರಗಳು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ನಿಭಾಯಿಸಲು ಅಭಿವೃದ್ಧಿಹೊಂದುತ್ತಿರುವ ರಾಷ್ಟ್ರಗಳಿಗೆ ಸಹಾಯ ಮಾಡಲು 2020 ರ ವೇಳೆಗೆ ವಾರ್ಷಿಕ US $ 100 ಶತಕೋಟಿಯನ್ನು ಜಂಟಿಯಾಗಿ ಒದಗಿಸಲು ಬದ್ಧವಾಗಿತ್ತು. ಆದರೆ 14 ವರ್ಷಗಳ ನಂತರ, ಈ ಭರವಸೆಯನ್ನು ಭಾಗಶಃ ಮಾತ್ರ ಪೂರೈಸಲಾಯಿತು.

ಈ ವಿಷಯದ ಹಿನ್ನಲೆಯಲ್ಲಿ, ಭಾರತದ ಜಿ20 ಅಧ್ಯಕ್ಷತೆಯಡಿಯಲ್ಲಿ ಹವಾಮಾನ ಹಣಕಾಸುಗಾಗಿ ಮಹತ್ವಾಕಾಂಕ್ಷೆಯನ್ನು ಬೆಳೆಸುವುದು ಮತ್ತು ಹವಾಮಾನ ಹಣಕಾಸನ್ನು ಅತ್ಯಂತ ವೇಗವಾಗಿ ಒದಗಿಸುವುದು ಪ್ರಮುಖ ಆದ್ಯತೆಯಾಗಿರುತ್ತದೆ. ಭಾರತದ ದೃಷ್ಟಿಯಲ್ಲಿ, ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹವಾಮಾನ ಹಣಕಾಸಿನಲ್ಲಿ ಸುಸ್ಥಿರ ಏಳಿಗೆಯನ್ನು ಕಾಣಲು ಮತ್ತು ತಮ್ಮ ಮಹತ್ವಾಕಾಂಕ್ಷೆಯ ಗುರಿಗಳನ್ನು ಸಾಧಿಸಲು ಪ್ರತಿ ವರ್ಷ 100 ಮಿಲಿಯನ್ ಯುಎಸ್ ಡಾಲರ್ ಗಳ ಅಗತ್ಯವಿದೆ ಮತ್ತು ಶ್ರೀಮಂತ ದೇಶಗಳು ಸಂಪನ್ಮೂಲಗಳ ಚಾಲನೆಯನ್ನು ಮುನ್ನಡೆಸಬೇಕು.

ಇದಕ್ಕೆ ಸಂಬಂಧಿಸಿದಂತೆ, ನವೆಂಬರ್ 2022 ರಲ್ಲಿ ಬಾಲಿಯಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹವಾಮಾನ ಹಣಕಾಸು ಒದಗಿಸಲು ಒಪ್ಪಿಗೆ ನೀಡಲಾಯಿತು ಮತ್ತು ಅಭಿವೃದ್ಧಿ ಹೊಂದುತ್ತಿರುವ ದೇಶಗಳನ್ನು ಬೆಂಬಲಿಸುವುದಕ್ಕಾಗಿ ಪ್ರತಿ ವರ್ಷ 100 ಯುಎಸ್ ಬಿಲಿಯನ್ ಡಾಲರ್ಗಳನ್ನು ಮಹತ್ವಾಕಾಂಕ್ಷೆಯ ಹೊಸ ಕಲೆಕ್ಟಿವ್ ಕ್ವಾಂಟಿಫೈಡ್ ಗೋಲ್ (NCQG) ನಲ್ಲಿ ನೀಡಲು ಒಪ್ಪಿಗೆ ಸೂಚಿಸಲಾಯಿತು.

ತನ್ನ ಅಧ್ಯಕ್ಷತೆಯಡಿಯಲ್ಲಿ, ಭಾರತ ಹವಾಮಾನ ಹಣಕಾಸಿಗಾಗಿ ಅಭಿವೃದ್ಧಿಹೊಂದಿದ ದೇಶಗಳು ವಾರ್ಷಿಕ 100 ಮಿಲಿಯನ್ ಯುಎಸ್ ಡಾಲರ್ ಗಳ ಮೊತ್ತವನ್ನು ಹೆಚ್ಚಿಸುವಂತೆ ಮನವೊಲಿಸುತ್ತದೆ. ಇದಲ್ಲದೆ ಭಾರತ ಇತರ ಜಿ20 ರಾಷ್ಟ್ರಗಳೊಡನೆ ಸೇರಿ ನವೀಕರಿಸಬಲ್ಲ ಶಕ್ತಿಯನ್ನೂ ಒಳಗೊಂಡಂತೆ ಶೂನ್ಯ ಮತ್ತು ಕಡಿಮೆ ಹೊರಸೂಸುವಿಕೆ ವಿದ್ಯುತ್ ಉತ್ಪಾದನೆಯ ನಿಯೋಜನೆಯನ್ನು ಹೆಚ್ಚಿಸಲು ಕಾರ್ಯನಿರ್ವಹಿಸುತ್ತದೆ. ಭಾರತದಲ್ಲಿ ಜಿ20 ಶೃಂಗಸಭೆಯು ತಾಪಮಾನ ಹೆಚ್ಚಳವನ್ನು 1.5 ಡಿಗ್ರಿ ಸೆಲ್ಸಿಯಸ್‌ಗೆ ಸೀಮಿತಗೊಳಿಸುವ ಗುರಿಯನ್ನು ಬಲಪಡಿಸುವ ನಿರೀಕ್ಷೆಯಿದೆ.

ಭಾರತ ಮತ್ತು ಇತರ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಯಶಸ್ಸಿಗಾಗಿ, ಬಾಲಿ ಘೋಷಣೆಯು ಅಭಿವೃದ್ಧಿ ಹೊಂದಿದ ದೇಶಗಳು ತಗ್ಗಿಸುವಿಕೆ ಮತ್ತು ಹೊಂದಾಣಿಕೆಯ ನಡುವೆ ಸಮತೋಲನವನ್ನು ಕಾಯ್ದಿರಿಸಿಕೊಳ್ಳುವ ನಿಟ್ಟಿನಲ್ಲಿ  2019ರ ಮಟ್ಟಕ್ಕಿಂತಲೂ 2025ರ ವೇಳೆಗೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಾಗಿ ಹವಾಮಾನ ಹಣಕಾಸಿನ ಒಟ್ಟು ಸೌಲಭ್ಯಗಳನ್ನು ದ್ವಿಗುಣಗೊಳಿಸುವಂತೆ ಒತ್ತಾಯಿಸಿತು. ಹವಾಮಾನ ಹಣಕಾಸು, ತಂತ್ರಜ್ಞಾನ ವರ್ಗಾವಣೆ ಮತ್ತು ಬಡ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಹವಾಮಾನ ಬದಲಾವಣೆಗಳ ವಿರುದ್ಧ ಹೋರಾಡುವ ಹೋರಾಟವನ್ನು ಬಲಿಷ್ಠಗೊಳಿಸಲು ಶ್ರೀಮಂತ ದೇಶಗಳು ಒಂದು ದೃಢ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಭಾರತ ನಿರೀಕ್ಷಿಸುತ್ತದೆ.

ಏರುತ್ತಿರುವ ಹವಾಮಾನ ಬಿಕ್ಕಟ್ಟನ್ನು ಗಮನಿಸಿದರೆ, ಕ್ರಮವನ್ನು ಜರುಗಿಸಲು ಇನ್ನು ತಡಮಾಡುವಂತಿಲ್ಲ. ಇದಕ್ಕೆ ಸಂಬಂಧಿಸಿದಂತೆ, ಹವಾಮಾನ ಹಣಕಾಸು ಕುರಿತ ಚರ್ಚೆಯನ್ನು ಇನ್ನು ಕ್ರಮವಾಗಿಸಲು ಅಭಿವೃದ್ಧಿ ಹೊಂದಿದ ದೇಶಗಳ ಮನವೊಲಿಸುವ ಜವಾಬ್ದಾರಿಯನ್ನು ಜಿ20 ಹೊತ್ತಿದೆ.  ತನ್ನ ಅಧ್ಯಕ್ಷತೆಯಡಿಯಲ್ಲಿ, ಭಾರತ ಹವಾಮಾನ ವೈಪರೇತ್ಯಗಳನ್ನು ತಗ್ಗಿಸಲು ಹಣಕಾಸು ಸಹಾಯ, ತಂತ್ರಜ್ಞಾನ ಮತ್ತು ಸಾಮರ್ಥ್ಯ-ನಿರ್ಮಾಣ ಬೆಂಬಲವನ್ನು ಒದಗಿಸುವಂತೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಒತ್ತಾಯಿಸುತ್ತದೆ. ಭಾರತದ ದೃಷ್ಟಿಯಲ್ಲಿ, ಅಭಿವೃದ್ಧಿ ಹೊಂದಿದ ದೇಶಗಳು, ಹಸಿರುಮನೆ ಅನಿಲ ಹೊರಸೂಸುವಿಕೆಗಳಿಗೆ ತಮ ಹೊಣೆಗಾರಿಕೆಯನ್ನು ಒಪ್ಪಿಕೊಂಡರೆ, ಹವಾಮಾನ ವೈಪರೀತ್ಯಗಳನ್ನು ಎದುರಿಸಲು ಸಂಪನ್ಮೂಲಗಳ ಚಾಲನೆಯನ್ನು ಮುನ್ನಡೆಸಬೇಕು. ಹೊಂದಾಣಿಕೆ ಮತ್ತು ತಗ್ಗಿಸುವಿಕೆ ಯೋಜನೆಗಳ ನಡುವೆ ಹಣದ ಸಮಾನ ಹಂಚಿಕೆ ಇರಬೇಕು.

# ಆಹಾರ ಭದ್ರತೆಗಾಗಿ G20 ಸಹಕಾರ ಹೆಚ್ಚಿಸುವುದು, ನವಧಾನ್ಯಗಳನ್ನು ಜನಪ್ರಿಯಗೊಳಿಸುವುದು

ಕೋವಿಡ್-19 ಸಾಂಕ್ರಾಮಿಕದಿಂದಾಗಿ ಮತ್ತು ರಷ್ಯಾ--ಉಕ್ರೇನ್ ಯುದ್ಧ ಬಿಕ್ಕಟ್ಟಿನ ನಂತರದ ಪೂರೈಕೆ ಸರಪಳಿಗಳಲ್ಲಿ ಅಡಚಣೆಗಳಿಂದಾಗಿ, ಆಹಾರ ಅಭದ್ರತೆಯು ಜಾಗತಿಕ ಕಾಳಜಿಯ ವಿಷಯವಾಗಿದೆ ಮತ್ತು ಭಾರತದ ಜಿ20 ಅಧ್ಯಕ್ಷತೆ ಅಡಿಯ ಕಾರ್ಯಸೂಚಿಯಲ್ಲಿ ಪ್ರಮುಖವಾಗಿ ಗಮನಹರಿಸಲಾಗುತ್ತದೆ. ಆಹಾರ ಬಿಕ್ಕಟ್ಟು ಸಮಸ್ಯೆಗಳು ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಎರಡೂ ದೇಶಗಳ ಮೇಲೆ ಪರಿಣಾಮ ಬೀರುವುದರಿಂದ, ಜಾಗತಿಕ ಆಹಾರ ಭದ್ರತೆಯನ್ನು ಹೆಚ್ಚಿಸಲು ಉತ್ತರ-ದಕ್ಷಿಣ ವಿಭಜನೆಯಾದ್ಯಂತ ಅಂತರರಾಷ್ಟ್ರೀಯ ಸಹಯೋಗ ಮತ್ತು ಸಹಾಯವನ್ನು ಹೆಚ್ಚಿಸಲು ಭಾರತವು ತನ್ನ G20 ಅಧ್ಯಕ್ಷತೆಯನ್ನು ಬಳಸಿಕೊಳ್ಳುತ್ತದೆ. ಈ ನಿಟ್ಟಿನಲ್ಲಿ, ಭಾರತ ತನ್ನ 1.3 ಬಿಲಿಯನ್ ಪ್ರಜೆಗಳಿಗೆ ಆಹಾರ ಭದ್ರತೆಯನ್ನು ಖಾತ್ರಿಪಡಿಸುವ ಸಾಮರ್ಥ್ಯವನ್ನು ಹೊಂದಿರುವುದರೊಂದಿಗೆ ಇದು ಅನೇಕ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಆಹಾರ ಪೂರೈಕೆದಾರನಾಗಿ ಹೊರಹೊಮ್ಮಿದೆ. ದಕ್ಷಿಣದಿಂದ ದಕ್ಷಿಣಕ್ಕೆ ಸಹಕಾರದ ನೀಡುವ ಉತ್ಸಾಹದಲ್ಲಿ, ಭಾರತವು ಅಫ್ಘಾನಿಸ್ತಾನಕ್ಕೆ 50,000 ಮೆಟ್ರಿಕ್ ಟನ್‌ಗಳಷ್ಟು ಗೋಧಿ ಮತ್ತು ಔಷಧಗಳು ಮತ್ತು ಲಸಿಕೆಗಳ ಬಹು ಭಾಗಗಳನ್ನು ಕಳುಹಿಸಿದೆ, ಇಂಧನ, ಅಗತ್ಯ ಸರಕುಗಳು ಮತ್ತು ವ್ಯಾಪಾರ ವಸಾಹತುಗಳಿಗಾಗಿ ಶ್ರೀಲಂಕಾಕ್ಕೆ 3.8 ಶತಕೋಟಿ ಯುಎಸ್ ಡಾಲರ್ ಗಳ ಸಾಲಗಳನ್ನು ವಿಸ್ತರಿಸಿದೆ ಮತ್ತು ಇತರವುಗಳಲ್ಲಿ ಮ್ಯಾನ್ಮಾರ್‌ಗೆ 10,000 ಮೆಟ್ರಿಕ್ ಟನ್ ಆಹಾರ ನೆರವು ಮತ್ತು ಲಸಿಕೆ ಸಾಗಣೆಯನ್ನು ಸಹ ಮಾಡಿದೆ.



ಸಾಂಕ್ರಾಮಿಕ ರೋಗ ಮತ್ತು ರಷ್ಯಾ-ಉಕ್ರೇನ್ ಬಿಕ್ಕಟ್ಟಿನ ಎರಡು ಹೊಡೆತಗಳಿಂದಾಗಿ ಜಾಗತಿಕ ಪೂರೈಕೆ ಸರಪಳಿಗಳ ಕುಸಿತವನ್ನು ಗಮನಿಸಿದರೆ, ಭಾರತವು ತನ್ನ G20 ಅಧ್ಯಕ್ಷತೆಯಲ್ಲಿ, ಗೊಬ್ಬರ ಮತ್ತು ಆಹಾರ ಧಾನ್ಯಗಳ ಪೂರೈಕೆ ಸರಪಳಿಯನ್ನು ಸ್ಥಿರವಾಗಿ ಮತ್ತು ಖಚಿತವಾಗಿ ನಿರ್ವಹಿಸಲು ಅಂತರರಾಷ್ಟ್ರೀಯ ಸಮುದಾಯವನ್ನು ಸಜ್ಜುಗೊಳಿಸುತ್ತದೆ. ನಿರ್ದಿಷ್ಟವಾಗಿ, ಭಾರತವು ರಸಗೊಬ್ಬರಗಳ ನಿರಂತರ ಪೂರೈಕೆಗೆ ಆದ್ಯತೆ ನೀಡುತ್ತದೆ.15-16 ನವೆಂಬರ್ 2022 ರಂದು ಬಾಲಿಯಲ್ಲಿ ನಡೆದ G20 ಶೃಂಗಸಭೆಯಲ್ಲಿ ಪಿಎಂ ಮೋದಿಯವರು "ಇಂದಿನ ರಸಗೊಬ್ಬರ ಕೊರತೆಯು ನಾಳಿನ ಆಹಾರ ಬಿಕ್ಕಟ್ಟಾಗಿದೆ, ಇದಕ್ಕೆ ಪ್ರಪಂಚವು ಪರಿಹಾರವನ್ನು ಹೊಂದಿಲ್ಲ" ಎಂದು ಹೇಳಿದರು.

ಜಾಗತಿಕ ಆಹಾರ ಬಿಕ್ಕಟ್ಟನ್ನು ಪರಿಹರಿಸಲು, ವಿಶ್ವ ಮಾರುಕಟ್ಟೆಗಳಿಗೆ ರಷ್ಯಾ ಆಹಾರ ಉತ್ಪನ್ನಗಳನ್ನು ಮತ್ತು ರಸಗೊಬ್ಬರಗಳನ್ನು ಪೂರೈಕೆ ಮಾಡಲು ಭಾರತವು ಕಪ್ಪು ಧಾನ್ಯ ಉಪಕ್ರಮವನ್ನು ಆರಂಭಿಸಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿ ಹಸಿವು ಮತ್ತು ಜಾಗತಿಕ ಆಹಾರ ಅಭದ್ರತೆಯನ್ನು ತಪ್ಪಿಸುವುದಕ್ಕಾಗಿ ಇದು ರಷ್ಯಾ ಮತ್ತು ಉಕ್ರೇನ್ ಫೆಡರೇಶನ್ ನಿಂದ ಆಹಾರ ಧನ್ಯ, ಆಹಾರ ಪದಾರ್ಥಗಳು ಮತ್ತು ರಸಗೊಬ್ಬರಗಳು/ಇನ್ಪುಟ್ ಗಳ ತಡೆರಹಿತ ಪೂರೈಕೆಯನ್ನು ಖಾತ್ರಿಪಡಿಸುತ್ತದೆ. ಈ ನಿಟ್ಟಿನಲ್ಲಿ, ಭಾರತ ಆಹಾರ ಮತ್ತು ರಸಗೊಬ್ಬರಗಳ ರೀತಿಯ ಉತ್ಪನ್ನಗಳ ಮೇಲೆ ರಫ್ತು ನಿಷೇಧ ಅಥವಾ ನಿರ್ಬಂಧನೆ ಮಾಡುವುದನ್ನು ವಿರೋಧಿಸುತ್ತದೆ.

ತನ್ನ ಜಿ20 ಅಧ್ಯಕ್ಷತೆ ಅಡಿಯಲ್ಲಿ, ಭಾರತ ಸವಾಲಿನ ಪರಿಸ್ಥಿತಿಗಳಲ್ಲಿಯೂ ಸಹ ಆಹಾರ ಪೂರೈಕೆ ಸರಪಳಿಗಳನ್ನು ಕಾರ್ಯಾಚರಣೆಯಲ್ಲಿರಿಸಲು ಅಂತರರಾಷ್ಟ್ರೀಯ ಪ್ರಯತ್ನಗಳ ಚಾಲನೆಯ ಮೇಲೆ ಗಮನ ಹರಿಸುತ್ತದೆ. ವಿಶೇಷವಾಗಿ ಪ್ರಪಂಚದ ದಕ್ಷಿಣ ದೇಶಗಳಲ್ಲಿ ಅಗತ್ಯವಿರುವ ಎಲ್ಲರಿಗೂ ಆಹಾರ ಮತ್ತು ಆಹಾರ ಉತ್ಪನ್ನಗಳ ಲಭ್ಯತೆ, ಅಗ್ಗ ಬೆಲೆ ಮತ್ತು ಸುಸ್ಥಿರತೆಯನ್ನು ಖಚಿತಪಡಿಸುವ ಮೂಲಕ ಆಹಾರ ಅಭದ್ರತೆಯನ್ನು ಪರಿಹರಿಸಲು ಭಾರತವು ಅಚಲ ಬದ್ಧತೆಯನ್ನು ತೋರಿಸಿದೆ.

ಭಾರತದ ಪ್ರಕಾರ ಆಹಾರ ಮತ್ತು ಪೌಷ್ಟಿಕಾಂಶದ ಭದ್ರತೆಯನ್ನು ಸುಧಾರಿಸಲು ಕೃಷಿ, ಆಹಾರ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಲ್ಲಿ ಹೆಚ್ಚಿನ ಸಿನರ್ಜಿಗಳನ್ನು ರಚಿಸಲು ನಾವೀನ್ಯತೆಗಳನ್ನು ಉತ್ತೇಜಿಸುವುದು ಪ್ರಮುಖ ಆದ್ಯತೆಯಾಗಿದೆ.

ಮುಂದೆ ಸಾಗುತ್ತಾ, ಭಾರತವು ನೈಸರ್ಗಿಕ ಕೃಷಿ ಉತ್ತೇಜಿಸುವುದು ಮತ್ತು ಸುಸ್ಥಿರ ಆಹಾರ ಭದ್ರತೆಯ ಕಡೆಗೆ ಗಮನಹರಿಸುತ್ತದೆ. ಹವಾಮಾನ-ಸ್ಥಿತಿಸ್ಥಾಪಕ ಮತ್ತು ಸ್ಮಾರ್ಟ್ ಕೃಷಿಯು ಆಹಾರ ಭದ್ರತೆಯ ಕ್ಷೇತ್ರದಲ್ಲಿ ಭಾರತದ ಅಂತರರಾಷ್ಟ್ರೀಯ ಸಹಯೋಗದ ಪ್ರಮುಖ ವೈಶಿಷ್ಟ್ಯವಾಗಿವೆ. ಅದರ ಅಧ್ಯಕ್ಷತೆಯ ಅಡಿಯಲ್ಲಿ, ಭಾರತವು ನವಧಾನ್ಯಗಳಂತಹ ಪೌಷ್ಟಿಕ ಮತ್ತು ಸಾಂಪ್ರದಾಯಿಕ ಆಹಾರ ಧಾನ್ಯಗಳನ್ನು ಮತ್ತೆ ಜನಪ್ರಿಯಗೊಳಿಸುತ್ತದೆ. ಈ ನಿಟ್ಟಿನಲ್ಲಿ, ಭಾರತವು ತನ್ನ ಅಧ್ಯಕ್ಷತೆಯಲ್ಲಿ ಅಂತರರಾಷ್ಟ್ರೀಯ ನವಧಾನ್ಯಗಳ ವರ್ಷವನ್ನು ಅತ್ಯಂತ ಉತ್ಸಾಹದಿಂದ ಆಚರಿಸಲು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ.

ಆಹಾರ ಭದ್ರತೆಯು ವಿಶ್ವ ಸಂಸ್ಥೆಯ ಸುಸ್ಥಿ ಅಭಿವೃದ್ಧಿ ಗುರಿಗಳಲ್ಲಿ ಒಂದಾಗಿರುವುದರಿಂದ, ಪ್ರಪಂಚದ ಆಹಾರ ಯೋಜನೆಗಳಿಗೆ ಜಿ20 ದೇಶಗಳ ಬೆಂಬಲ ಬಹಳ ನಿರ್ಣಾಯಕವಾಗಿರುತ್ತದೆ. ಭಾರತವು ಎಲ್ಲರಿಗಾಗಿ ಆಹಾರ ಭದ್ರೆತಯನ್ನು ಖಾತ್ರಿಪಡಿಸಲು ನಾಗರೀಕ-ಕೇಂದ್ರಿತ ಉಪಕ್ರಮ “ಒಂದು ದೇಶ, ಒಂದು ಪಡಿತರ ಚೀಟಿ ಯೋಜನೆ” ಯನ್ನು ಸಹ ಆರಂಭಿಸಿದೆ.

ಆಹಾರ ಭದ್ರತೆಯ ಕ್ಷೇತ್ರದಲ್ಲಿ, ಪ್ರಪಂಚದಲ್ಲಿನ ಅತಿ ದೊಡ್ಡ ಆಹಾರ ಭದ್ರತೆ ಉಪಕ್ರಮವನ್ನೂ ಒಳಗೊಂಡಂತೆ ಭಾರತ ತನ್ನ ಕಾರ್ಯಗಳಲ್ಲಿ ಅತ್ಯಂತ ಒಳ್ಳೆಯ ಸಾಧನೆಗಳನ್ನು ಮಾಡಿದೆ. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಯೋಜನೆಯಡಿಯಲ್ಲಿ(PMGKAy), ಭಾರತ ಸರ್ಕಾರವು ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆಯಡಿಯಲ್ಲಿ ಒದಗಿಸಲಾಗುವ ನಿಯಮಿತ ಮಾಸಿಕ ಆಹಾರಧಾನ್ಯಗಳನ್ನು ಹೊರತುಪಡಿಸಿ ಪ್ರತಿ ತಿಂಗಳು ಒಬ್ಬ ವ್ಯಕ್ತಿಗೆ 5 ಕೆಜಿ ಆಹಾರ ಧಾನ್ಯಗಳನ್ನು ನೀಡುತ್ತದೆ. ಕೊರೋನಾ ವೈರಸ್ ಸಾಂಕ್ರಾಮಿಕ ಉತ್ತುಂಗದಲ್ಲಿದ್ದಾಗಲೂ ಸಹ ಈ ಯೋಜನೆಯು 800ಕ್ಕೂ ಹೆಚ್ಚು ದಶಲಕ್ಷ ಭಾರತೀಯರಿಗೆ ಆಹಾರ ಭದ್ರತೆಯನ್ನು ಒದಗಿಸಿದೆ. ಭಾರತದಲ್ಲಿ ಕಡು ಬಡತನ ರೇಖೆಯಲ್ಲಿ ಹೆಚ್ಚಳವಾಗುವುದನ್ನು ತಪ್ಪಿಸಿದ ಈ ಯೋಜನೆಯನ್ನು IMF ಪ್ರಶಂಶಿಸಿದೆ ಮತ್ತು ಬಡವರ ಮೇಲೆ ಉಂಟಾಗಬಹುದಾದ ಕೋವಿಡ್ ನ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಆಹಾರದ ಉತ್ಪನ್ನಗಳು ಗಣನೀಯವಾಗಿ ಕೆಲಸ ಮಾಡಿದೆ ಎಂದು ಒತ್ತಿ ಹೇಳಿದೆ.

ಜಾಗತಿಕ ಆಹಾರ ಭದ್ರತೆಯನ್ನು ಹೆಚ್ಚಿಸುವ ಅಂತರರಾಷ್ಟ್ರೀಯ ಪ್ರಯತ್ನದ ವಿಷಯದಲ್ಲಿ, ಭಾರತ ಇತರ ಜಿ20 ದೇಶಗಳಿಗೆ ಹೋಲಿಸಿದರೆ ಅಪಾರ ಕೃಷಿ ಮಾನವಶಕ್ತಿಯನ್ನು ಹೊಂದಿದೆ, ಇದನ್ನು ಆಹಾರ ಉತ್ಪಾದನೆಯನ್ನು ವೃದ್ಧಿಸುವಲ್ಲಿ ಬಳಸಬಹುದಾಗಿದೆ. ಹೆಚ್ಚಾಗಿ, ಜಾಗತಿಕ ಆಹಾರ ಭದ್ರೆತಯನ್ನು ಹೆಚ್ಚಿಸುವಲ್ಲಿ ಭಾರತೀಯ ಕೃಷಿ ಪ್ರತಿಭೆಗಳು ಪ್ರಮುಖ ಪಾತ್ರವಹಿಸುತ್ತದೆ. ಭಾರತೀಯ ಕೃಷಿ ಕೌಶಲ್ಯಗಳು ಪ್ರಪಂಚದ ಕೆಲವು ದೇಶಗಳಲ್ಲಿ ಚೀಸ್ ಮತ್ತು ಆಲಿವ್‌ನಂತಹ ಸಾಂಪ್ರದಾಯಿಕ ಕೃಷಿ ಉತ್ಪನ್ನಗಳಿಗೆ ಹೊಸ ಜೀವನವನ್ನು ನೀಡಲು ಸಹಾಯ ಮಾಡಿದೆ

ಡಿಜಿಟಲ್ ತಂತ್ರಜ್ಞಾನಗಳು ಮತ್ತು ಕೃಷಿ-ತಂತ್ರಜ್ಞಾನ ಸಂಸ್ಥೆಗಳಲ್ಲಿ ಸುಧಾರಣೆಗಳು ಹೆಚ್ಚಾಗುತ್ತಿರುವುದರೊಂದಿಗೆ, ಶೂನ್ಯ-ಟಿಲ್ ಕೃಷಿ, ನಿಖರವಾದ ಕೃಷಿ, ಗುತ್ತಿಗೆ ಕೃಷಿ, ಹನಿ ನೀರಾವರಿ ಮುಂತಾದ ಸಂಪ್ರದಾಯವಾದಿ ಮತ್ತು ಕಡಿಮೆ-ವೆಚ್ಚದ ಕೃಷಿ ತಂತ್ರಗಳನ್ನು ಉತ್ತೇಜಿಸಲು ಮತ್ತು ಗುಣಮಟ್ಟದ ಬೀಜಗಳನ್ನು ಅಗ್ಗದ ಬೆಲೆಗಳಲ್ಲಿ ಒದಗಿಸಲು ಭಾರತವು ತನ್ನ ಜ್ಞಾನ ಮತ್ತು ತಾಂತ್ರಿಕ ಜ್ಞಾನವನ್ನು ಹಂಚಿಕೊಳ್ಳಲು ಅವಕಾಶವನ್ನು ಹೊಂದಿದೆ.

ಹಸಿವು ಮತ್ತು ಕುಪೋಷಣೆಯನ್ನು ನಿವಾರಿಸಲು ಕೃಷಿಯನ್ನು ಹೆಚ್ಚು ಪರಿಸರ ಸುಸ್ಥಿರವನ್ನಾಗಿಸಲು ಜಿ20 ಪ್ರಯತ್ನಗಳನ್ನು ಸುಧಾರಿಸುವುದು ನಿರ್ಣಾಯಕವಾಗಿದೆ. ಈ ನಿಟ್ಟಿನಲ್ಲಿ, ಧನಾತ್ಮಕ, ಪೌಷ್ಟಿಕ ಫಲಿತಾಂಶಗಳನ್ನು ಖಾತ್ರಿಪಡಿಸಿಕೊಳ್ಳಲು ಕೀಟನಾಶಕಗಳು, ಸಸ್ಯನಾಶಕಗಳು ಮತ್ತು ಕಲುಷಿತ-ಮುಕ್ತವಾಗಿರುವ ಅನೇಕ ಕೃಷಿ ತಂತ್ರಜ್ಞಾಗಳನ್ನು ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳಲು ಅಂತರರಾಷ್ಟ್ರೀಯ ಸಹಕಾರದ ಅಗತ್ಯವಿದೆ.



# ಜಾಗತಿಕ ಹಣಕಾಸು ಆಡಳಿತವನ್ನು ಪ್ರಜಾಪ್ರಭುತ್ವಗೊಳಿಸುವುದು: 21 ನೇ ಶತಮಾನದ ವಾಸ್ತವಗಳಿಗೆ ಹೊಂದಿಕೊಳ್ಳುವುದು

ಎರಡನೆಯ ವಿಶ್ವ ಯುದ್ಧದ ನಂತರ ರಚನೆಯಾದ ಪ್ರಪಂಚವು ಬಹಳ ಹಳೆಯದಾಗಿದೆ ಮತ್ತು ಸುಸ್ತಾಗಿದೆ. ಇದು ಪರೋಕ್ಷವಾಗಿ ಉಂಟಾಗುತ್ತಿರುವ ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆ ನೀಡುವ ಜಾಗತಿಕ ಸಂಸ್ಥೆಗಳ ಸಾಮರ್ಥ್ಯದ ಮೇಲೆ ಅಡ್ಡ ಪರಿಣಾಮ ಬೀರಿವೆ. ಇದಕ್ಕೆ ಸಂಬಂಧಿಸಿದಂತೆ, ಜಾಗತಿಕ ಹಣಕಾಸು ಆಡಳಿತ ಸಂಸ್ಥೆಗಳನ್ನು ನಡೆಯುತ್ತಿರುವ ಬದಲಾವಣೆಗಳ ಪ್ರಜಾಸತ್ತಾತ್ಮಕವಾಗಿ ಮತ್ತು ಪ್ರತಿನಿಧಿಯನ್ನಾಗಿ ಮಾಡುವುದು ಭಾರತದ ಜಿ20 ಅಧ್ಯಕ್ಷತೆಯ ಅಡಿಯಲ್ಲಿನ ಪ್ರಮುಖ ಆದ್ಯತೆಯಾಗಿದೆ. ವಿಶ್ವ ಬ್ಯಾಂಕ್ ಮತ್ತು IMF ರೀತಿಯ ಸಂಸ್ಥೆಗಳು ಪಶ್ಚಿಮದ ಭದ್ರಕೋಟೆಗಳಾಗಿವೆ ಮತ್ತು ಇದು ಹೀಗೆಯೇ ಉಳಿದುಕೊಳ್ಳಲು ಉದಯೋನ್ಮುಖ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಹೆಚ್ಚಿನ ಪ್ರಾತಿನಿಧ್ಯ ಮತ್ತು ಬೆಂಬಲವನ್ನು ಒದಗಿಸುವುದು ಅಗತ್ಯವಾಗಿದೆ. ಅಭಿವೃದ್ಧಿ ಬ್ಯಾಂಕ್‌ಗಳು ಸೇರಿದಂತೆ ಬಹುಪಕ್ಷೀಯ ಸಂಸ್ಥೆಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳು ಉದಯೋನ್ಮುಖ ಆರ್ಥಿಕತೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ತುರ್ತಾಗಿ ಸುಧಾರಣೆಯ ಅಗತ್ಯವಿದೆ. ಇದಕ್ಕಾಗಿ ಜಾಗತಿಕ ಆಡಳಿತ ಸಂಸ್ಥೆಗಳ ವೇಗದ ಸುಧಾರಣೆಗಳು ಭಾರತದ G20 ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ಆದ್ಯತೆಗಳಾಗಿವೆ.

ಉಕ್ರೇನ್ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಗತ್ಯ ವಸ್ತುಗಳ ಬಿಕ್ಕಟ್ಟು ಮತ್ತು ಜಾಗತಿಕ ಪೂರೈಕೆ ಸರಪಳಿಗಳ ಕುಸಿತವು ಜಾಗತಿಕ ಆಡಳಿತ ಸುಧಾರಣೆಗಳ ವೇಗವನ್ನು ಹೆಚ್ಚು ತುರ್ತು ಮಾಡಿದೆ. ಬಾಲಿಯಲ್ಲಿ ನಡೆದ ಜಿ20 ಶೃಂಗಸಭೆಯಲ್ಲಿ ಮಾಡಿದ ಭಾಷಣದಲ್ಲಿ, ಪ್ರಧಾನಿ ಮೋದಿಯವರು ಬಿಕ್ಕಟ್ಟಿನ ಪ್ರಮಾಣವನ್ನು ಪ್ರಸ್ತಾಪಿಸಿದರು ಮತ್ತು ಬಹುಪಕ್ಷೀಯ ಸಂಸ್ಥೆಗಳ ಸುಧಾರಣೆಯ ಅಗತ್ಯವನ್ನು ಸಹ ಒತ್ತಿ ಹೇಳಿದರು."ಪ್ರತಿ ದೇಶದ ಬಡ ನಾಗರಿಕರ ಸವಾಲು ತುಂಬಾ ತೀವ್ರವಾಗಿದೆ. ದೈನಂದಿನ ಜೀವನವು ಅವರಿಗೆ ಈಗಾಗಲೇ ಹೋರಾಟವಾಗಿತ್ತು. ದ್ವಿಗುಣ ಬಿಕ್ಕಟ್ಟನ್ನು ನಿಭಾಯಿಸುವ ಆರ್ಥಿಕ ಸಾಮರ್ಥ್ಯ ಅವರಲ್ಲಿಲ್ಲ. ದ್ವಿಗುಣ ಬಿಕ್ಕಟ್ಟಿನಿಂದಾಗಿ, ಅವರು ತಮ್ಮ ಆರ್ಥಿಕ ಸಾಮರ್ಥ್ಯದ ಕೊರತೆಯನ್ನು ಹೊಂದಿದ್ದಾರೆ ಮತ್ತು ಅದನ್ನು ನಿಭಾಯಿಸಲು ಸಾಧ್ಯವಾಗುವುದಿಲ್ಲ. ಈ ವಿಷಯಗಳಲ್ಲಿ ಯುಎನ್‌ನಂತಹ ಬಹುಪಕ್ಷೀಯ ಸಂಸ್ಥೆಗಳು ವಿಫಲವಾಗಿವೆ ಎಂಬುದನ್ನು ಒಪ್ಪಿಕೊಳ್ಳಲು ನಾವು ಹಿಂಜರಿಯಬಾರದು ಮತ್ತು ಅದರಲ್ಲಿ ಸೂಕ್ತ ಸುಧಾರಣೆ ಮಾಡಲು ನಾವೆಲ್ಲರೂ ವಿಫಲರಾಗಿದ್ದೇವೆ" ಎಂದು ಪ್ರಧಾನಿ ಮೋದಿಯವರು ಹೇಳಿದರು. ಭಾರತದ ದೃಷ್ಟಿಯಲ್ಲಿ, ಕೋವಿಡ್ ನಂತರದ ತ್ವರಿತ ಚೇತರಿಕೆಗಾಗಿ ಉತ್ತಮ ಜಾಗತಿಕ ಆಡಳಿತವನ್ನು ಖಚಿತಪಡಿಸಿಕೊಳ್ಳಲು ಬಹುಪಕ್ಷೀಯ ಸಂಸ್ಥೆಗಳಲ್ಲಿ ಸುಧಾರಣೆಗಳು ಅವಶ್ಯಕ.

ಸದ್ಯ, IMF ಮತ್ತು ವಿಶ್ವ ಬ್ಯಾಂಕ್ ನ ಆಡಳಿತ ಮಾದರಿಯು ವಿಶಿಷ್ಟ ಆಡಳಿತ ಮಾದರಿಯನ್ನು ಹೊಂದಿದೆ. ಮತದಾನವು ಅವರ ಸದಸ್ಯ ರಾಷ್ಟ್ರಗಳ ಹಣಕಾಸು ಗಾತ್ರವನ್ನು ಅವಲಂಬಿಸಿರುವ ಮಂಡಳಿಗಳಿಂದ ನಿಯಂತ್ರಿಸಲ್ಪಡುತ್ತವೆ. ಇದು ಸಂಪೂರ್ಣ ಅಸ್ತವ್ಯಸ್ತಕ್ಕೆ ಕಾರಣವಾಗಿದೆ: ಇದು ಸಂಪೂರ್ಣ ಅಸಿಮ್ಮೆಟ್ರಿಗೆ ಕಾರಣವಾಯಿತು: US ಸರ್ಕಾರವು 16% ಮತ ಪಾಲನ್ನು ಹೊಂದಿದ್ದು, 100 ದಶಲಕ್ಷಕ್ಕೂ ಹೆಚ್ಚು ಜನರಿಗೆ ನೆಲೆಯಾಗಿರುವ ಇಥಿಯೋಪಿಯಾದಂತಹ ದೇಶವು IMF ನಲ್ಲಿ ಕೇವಲ 0.09% ಮತಗಳನ್ನು ನಿಯಂತ್ರಿಸುತ್ತದೆ. ವಿಶ್ವ ಬ್ಯಾಂಕಿನಲ್ಲಿ ಯಾವಾಗಲೂ ಒಬ್ಬ ಯುಎಸ್ ಪ್ರಜೆ ಅಮೇರಿಕನ್ ನಡೆಸುತ್ತಾರೆ ಮತ್ತು IMF ಅನ್ನು ಒಬ್ಬ ಯುರೋಪಿಯನ್ ನಡೆಸುತ್ತಾರೆ. ಎರಡೂ ಸಂಸ್ಥೆಗಳು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ ರಾಜಧಾನಿಯಲ್ಲಿ ತಮ್ಮ ಪ್ರಧಾನ ಕಛೇರಿಯನ್ನು ಹೊಂದಿವೆ ಮತ್ತು ಹೆಚ್ಚಿನ ಆದಾಯದ ದೇಶಗಳಿಂದ ಅನೇಕ ಅರ್ಥಶಾಸ್ತ್ರಜ್ಞರನ್ನು ನೇಮಿಸಿಕೊಂಡಿವೆ. ಅಭಿವೃದ್ಧಿ ಹೊಂದಿದ ದೇಶಗಳಿಗೆ ಅನುಕೂಲವಾಗುವ ಈ ಆಡಳಿತ ರಚನೆಯು ತುರ್ತಾಗಿ ಬದಲಾಗಬೇಕಾಗಿದೆ.

ಭಾರತವು ತನ್ನ ಕೇಂದ್ರದಲ್ಲಿ ಬಲವಾದ, ಕೋಟಾ-ಆಧಾರಿತ ಮತ್ತು ಸಮರ್ಪಕವಾಗಿ ಸಂಪನ್ಮೂಲ ಹೊಂದಿರುವ IMF ಜೊತೆಗೆ ಬಲವಾದ ಮತ್ತು ಪರಿಣಾಮಕಾರಿ ಜಾಗತಿಕ ಹಣಕಾಸು ಸುರಕ್ಷತಾ ನಿವ್ವಳವನ್ನು ನಿರ್ವಹಿಸಲು ಬದ್ಧವಾಗಿದೆ. ಡಿಸೆಂಬರ್ 15, 2023 ರೊಳಗೆ ಹೊಸ ಕೋಟಾ ಸೂತ್ರವನ್ನು ಮಾರ್ಗದರ್ಶಿಯಾಗಿ ಒಳಗೊಂಡಂತೆ ಕೋಟಾಗಳ 16 ನೇ ಸಾಮಾನ್ಯ ಚರ್ಚೆಯ ಅಡಿಯಲ್ಲಿ IMF ಆಡಳಿತ ಸುಧಾರಣೆಯ ಪ್ರಕ್ರಿಯೆಯನ್ನು ಮುಂದುವರಿಸಲು ಭಾರತವು ಸಿದ್ಧವಾಗಿದೆ. G20 ದೇಶಗಳು ಸುಸ್ಥಿರ ಬಂಡವಾಳ ಹರಿವುಗಳನ್ನು ಉತ್ತೇಜಿಸುವ ಮೂಲಕ ಮತ್ತು ಸ್ಥಳೀಯ ಕರೆನ್ಸಿ ಬಂಡವಾಳ ಮಾರುಕಟ್ಟೆಗಳನ್ನು ಅಭಿವೃದ್ಧಿಪಡಿಸುವ ಮೂಲಕ ಅಂತರರಾಷ್ಟ್ರೀಯ ಹಣಕಾಸು ವಾಸ್ತುಶಿಲ್ಪದ ದೀರ್ಘಾವಧಿಯ ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಬಲಪಡಿಸಲು ಕೆಲಸ ಮಾಡುತ್ತವೆ ಎಂದು ನಿರೀಕ್ಷಿಸಲಾಗಿದೆ.

